ಪ್ರಾರ್ಥನೆಗಾಗಿ

ರಾಮಕೃಷ್ಣಾಶ್ರಮ
ಮೈಸೂರು

ಅವ್ಲಂಬ್ಯ

[illegible]

ಈಶಾವಾಸ್ಯೋಪನಿಷತ್

ಮೂಲ ಪ್ರತಿಪದಾರ್ಥ
ತಾತ್ಪರ್ಯ ಟಿಪ್ಪಣಿಗಳೊಡನೆ

ಸ್ವಾಮಿ ಆದಿದೇವಾನಂದ

ಶ್ರೀರಾಮಕೃಷ್ಣಾಶ್ರಮ
ಮೈಸೂರು

ಪ್ರಕಾಶಕರು
ಅಧ್ಯಕ್ಷರು
ಶ್ರೀರಾಮಕೃಷ್ಣ ಆಶ್ರಮ
ಮೈಸೂರು

ಮೊದಲನೆಯ ಪ್ರಕಾಶನ ೧೯೫೬

ಮುದ್ರಕರು
ಶಾರದಾ ಛಾಪಖಾನೆ
ಮಂಗಳೂರು–೧

ಪ್ರಸ್ತಾವನೆ

ಕ್ರಿ. ಪೂ. ೬ನೆಯ ಶತಮಾನವು ನಮ್ಮನ್ನು ಬೆರಗುಗೊಳಿಸುವ ಯುಗ. ಆಗ ಮಾನವನ ಭಾವಪ್ರಪಂಚದಲ್ಲಿ ಒಂದು ಅದ್ಭುತಕ್ರಾಂತಿಯುಂಟಾಗಿತ್ತು. ಆ ಸಮಯದಲ್ಲಿ ಗ್ರೀಸ್‌ದೇಶದ ಪೈತಾಗೊರಸ್, ಚೀನಾದೇಶದ ಕನ್‌ಪ್ಯೂಷಿಯಸ್, ಗೌತಮಬುದ್ಧ, ಪರ್ಷಿಯದ ಸೊರೊ ಆಸ್ಟರ್ ಮೊದಲಾದವರು ತಮ್ಮ ತತ್ತ್ವಗಳನ್ನು ಪ್ರಚಾರಮಾಡುತ್ತಿದ್ದರು. ಇದಕ್ಕೆ ಮೊದಲು ನಮ್ಮ ದೇಶದಲ್ಲಿ ಸೂಕ್ಷ್ಮವೂ ಪ್ರಬಲವೂ ಆದ ಒಂದು ತತ್ತ್ವಪ್ರವೃತ್ತಿಯು ಪ್ರಸರಿಸಲು ಪ್ರಾರಂಭಿಸಿತ್ತು. ಇದು ಇಡಿಯ ಭಾರತವರ್ಷದ ಮಾನಸಿಕಕಲ್ಪನೆಗಳನ್ನೆಲ್ಲಾ ಪ್ರಚೋದಿಸಿ ತನ್ನ ಪ್ರಭಾವವನ್ನು ದೇಶಾಂತರಗಳಲ್ಲೂ ಬೀರಿತು. ವೇದವಿರೋಧಿಗಳಾದ ಚಾರ್ವಾಕರೂ, ವೈದಿಕರಾದ ಕರ್ಮಮೀಮಾಂಸಕರೂ, ಬೌದ್ಧರೂ, ಸಾಂಖ್ಯರೂ, ವೇದಾಂತಿಗಳೂ ತಮ್ಮ ಮತಗಳನ್ನು ಪ್ರತಿಪಾದಿಸಲು ಉಪನಿಷತ್ತುಗಳಲ್ಲಿ ಪ್ರಮಾಣಗಳನ್ನು ಕಂಡುಹಿಡಿದಿರುತ್ತಾರೆ. ನಮ್ಮ ಪ್ರಾಚೀನ ಋಷಿಗಳಿಗೆ ಒಂದು ಅಲೌಕಿಕದೃಷ್ಟಿ ಇತ್ತು. ಪ್ರಕೃತಿಯ ಮೋಹಜಾಲದಲ್ಲಿ ಇವರು ಸಿಕ್ಕಿಬೀಳಲಿಲ್ಲ. ಜೀವನವೆಂದರೇನು? ದೃಷ್ಟಜೀವನಕ್ಕೂ ಅದೃಷ್ಟಗತಿಗಳಿಗೂ ಏನು ಸಂಬಂಧ?—ಇವೇ ಮೊದಲಾದ ಪ್ರಶ್ನೆಗಳನ್ನು ಹಾಕತೊಡಗಿದರು. "ಜಗತ್ತಿನ ಕಾರಣವು ಯಾವುದು? ಬ್ರಹ್ಮವೇ? ನಾವು ಎಲ್ಲಿಂದ ಹುಟ್ಟುತ್ತೇವೆ? ನಾವು ಏಕೆ ಜೀವಿಸುತ್ತೇವೆ? ನಮ್ಮ ಕೊನೆಯ ಅವಸ್ಥೆ ಏನು?" ಎಂದು ಶ್ವೇತಾಶ್ವತರೋಪನಿಷತ್ತಿನ[1] ಮೊದಲನೆಯ ಮಂತ್ರವು ಕೇಳುತ್ತದೆ.

ಭಾರತವರ್ಷದ ಸಂಸ್ಕೃತಿಗೆ ವೇದವೇ ಮುಖ್ಯವಾದ ಆಧಾರ. ಅದರ ಉತ್ತರಭಾಗವಾದ ಉಪನಿಷತ್ತುಗಳೇ ಸರ್ವದರ್ಶನಗಳಿಗೂ ಮೂಲ. ನೈರಾ

---

[1]ಕಿಂ ಕಾರಣಂ ಬ್ರಹ್ಮ ಕುತಃ ಸ್ಮ ಜಾತಾ
ಜೀವಾಮ ಕೇನ ಕ್ವ ಚ ಸಂಪ್ರತಿಷ್ಠಾಃ ।
ಅಧಿಷ್ಠಿತಾಃ ಕೇನ ಸುಖೇತರೇಷು
ವರ್ತಾಮಹೇ ಬ್ರಹ್ಮವಿದೋ ವ್ಯವಸ್ಥಾಮ್ ॥
ಶ್ವೇತಾಶ್ವತರೋಪನಿಷತ್, ೧-೧.

ತ್ಮ್ಯವಾದದ ನಿರಾಕರಣೆಯನ್ನೂ ಬಾಹ್ಯಪೂಜೆಯ ರಸಹೀನತೆಯನ್ನೂ ಕರ್ಮ ಕಾಂಡದ ನಿರರ್ಥಕತೆಯನ್ನೂ ಇಲ್ಲಿ ನೋಡಬಹುದು. ಸಮಸ್ತದೇವದೇವಿಯರೂ ಅದ್ವಿತೀಯಪರಮಾರ್ಥಶಕ್ತಿಯ ಅಂಶಗಳೆಂದೂ, ಅಚಿದ್ವಸ್ತುಗಳಿಗಿಂತ ಚಿದ್ವಸ್ತುವೇ ಮುಖ್ಯವೆಂದೂ, ಈ ಚಿದ್ವಸ್ತುವಿನ ಮೂಲಕ ಜೀವ ಜಗತ್ತು ಈಶ್ವರ ಎಂಬ ತತ್ತ್ವತ್ರಯದ ಸ್ವರೂಪಗಳು ಮತ್ತು ಸಂಬಂಧಗಳು ತಿಳಿಯುತ್ತವೆಂದೂ, ಈಶ್ವರನೇ ಚಿದಚಿದ್ವಸ್ತುಗಳಲ್ಲಿ ಅಂತರ್ಯಾಮಿಯಾಗಿರುವನೆಂದೂ ಇಲ್ಲಿ ತಿಳಿಯಬಹುದು; ಕ್ಷುದ್ರವಾದ ವಿಷಯಸುಖವು ನಮ್ಮನ್ನು ಹೇಗೆ ಶೃಂಖಲೆಗಳಿಂದ ಬಂಧಿಸುವುದೆಂದೂ, ಇಂದ್ರಿಯನಿಗ್ರಹವು ಹೇಗೆ ಮುಕ್ತಿಪ್ರದವೆಂದೂ ಉಪನಿಷತ್ತುಗಳು ಸಾರುತ್ತವೆ. ಉಪನಿಷತ್ತುಗಳ ಪ್ರಭಾವ ಪಾಶ್ಚಿಮಾತ್ಯವಿದ್ವಾಂಸರಲ್ಲಿ ಕೂಡ ಒಂದು ವಿಶಿಷ್ಟಪರಿಣಾಮವನ್ನು ತಂದಿರುತ್ತದೆ. ಶೋಪೆನ್‌ಹವರ್ ಎಂಬ ಜರ್ಮನಿಯ ತಜ್ಞನ ಮತದಲ್ಲಿ ಉಪನಿಷತ್ತುಗಳ ಭಾವಗಳು ಸ್ಪಷ್ಟವಾಗಿ ಕಂಡುಬರುತ್ತವೆ. "ಈ ಪ್ರಪಂಚದಲ್ಲಿ ಉಪನಿಷತ್ತುಗಳಿಗಿಂತ ಪ್ರತಿಫಲವನ್ನು ಕೊಡುವ, ಉದ್ಧರಿಸುವ ಯಾವ ಗ್ರಂಥವೂ ಇಲ್ಲ. ನಾನು ಬದುಕಿರುವಾಗ ಇದರಿಂದ ಮನಃಸಮಾಧಾನವನ್ನು ಪಡೆದೆನು. ಮರಣಾನಂತರವೂ ಇದರಿಂದಲೇ ಶಾಂತಿಯನ್ನು ಪಡೆಯುತ್ತೇನೆ" ಎಂದು ಅವನು ಹೇಳಿದ್ದಾನೆ. ಪರ್ಮೆನೈಡೀಸ್, ಪ್ಲೇಟೋ, ಕಾಂಟ್ ಮೊದಲಾದ ದಾರ್ಶನಿಕರ ತತ್ತ್ವಗಳು ಉಪನಿಷತ್ತುಗಳಲ್ಲಿ ಸಂಗ್ರಹ ರೂಪದಿಂದ ಅಡಗಿವೆಯೆಂದು ಡಾಯ್ಸನ್ ಮಹಾಶಯನು ಹೇಳಿರುತ್ತಾನೆ. ಇವನು ಈ ದೇಶಕ್ಕೆ ಬಂದಾಗ ಬೊಂಬಾಯಿಯ ರಾಯಲ್ ಏಶಿಯಾಟಿಕ್ ಸೊಸೈಟಿಯಲ್ಲಿ ಮಾತನಾಡುತ್ತ ಈ ಉಪದೇಶವನ್ನು ಕೊಟ್ಟನು—"ಸಾಂಪ್ರದಾಯಿಕವಾದ ವೇದಾಂತವು ನೈತಿಕಜೀವನದ ಪ್ರಬಲವಾದ ಆಧಾರ. ಜೀವನ ಮರಣಗಳ ನರಳಾಟದಲ್ಲಿ ಇದು ಸಮಾಧಾನವನ್ನು ಕೊಡುವುದು. ಭಾರತೀಯರೆ, ಇದನ್ನು ಬಿಡಬೇಡಿ."

ಪ್ರಸ್ಥಾನತ್ರಯದಲ್ಲಿ ಮೊದಲನೆಯ ಸ್ಥಾನ ಉಪನಿಷತ್ತುಗಳಿಗೆ; ಅನಂತರ ವೇದಾಂತಸೂತ್ರಗಳು ಮತ್ತು ಭಗವದ್ಗೀತೆ. ಉಪನಿಷತ್ ಎಂದರೇನು? ಶ್ರೀಶಂಕರಭಗವತ್ಪಾದರು ತಮ್ಮ ಕಾಠಕೋಪನಿಷದ್ಭಾಷ್ಯದ ಅವತರಣಿಕೆಯಲ್ಲಿ ಹೇಳಿರುವ ಭಾವಾರ್ಥ ಹೀಗಿದೆ:

ವಿಶರಣ, ಗತಿ, ಅವಸಾದನ—ಎಂಬ ಅರ್ಥಗಳುಳ್ಳ "ಸದ್" ಧಾತುವಿನ ಹಿಂದೆ "ಉಪ", "ನಿ" ಎಂಬ ಉಪಸರ್ಗಗಳೂ, ಮುಂದೆ "ಕ್ವಿಪ್" ಎಂಬ ಪ್ರತ್ಯಯವೂ ಬಂದು "ಉಪನಿಷತ್" ಎಂಬ ರೂಪವು ಆಗಿರುತ್ತದೆ. ಉಪನಿಷತ್ ಎಂಬ ಶಬ್ದಕ್ಕೆ ಬ್ರಹ್ಮವಿಷಯವಾದ ವಿದ್ಯೆ ಎಂದರ್ಥ. ವಿರಕ್ತರೂ ಬ್ರಹ್ಮವಿದ್ಯಾನಿಷ್ಠರೂ ಆದ ಮುಮುಕ್ಷುಗಳ ಸಂಸಾರಬೀಜವಾದ ಅವಿದ್ಯಾದಿಗಳನ್ನು ನಾಶಗೊಳಿಸುವುದು (ಸದ್ = ವಿಶರಣ) ಎಂಬ ಅರ್ಥಯೋಗದಿಂದ ಬ್ರಹ್ಮವಿದ್ಯೆಯು ಉಪನಿಷತ್ ಎನಿಸುತ್ತದೆ. ಇದು ಧಾತುವಿನ ಮೊದಲನೆಯ ಅರ್ಥ. ಮುಮುಕ್ಷುಗಳನ್ನು ಬ್ರಹ್ಮನಲ್ಲಿ ಸೇರಿಸುವುದು (ಸದ್ = ಗತಿ) ಎಂಬ ಅರ್ಥಯೋಗದಿಂದ ಈ ವಿದ್ಯೆಯು ಉಪನಿಷತ್ ಎನಿಸುತ್ತದೆ. ಇದು ಧಾತುವಿನ ಎರಡನೆಯ ಅರ್ಥ. ಗರ್ಭವಾಸ ಜನ್ಮ ಮುಪ್ಪು ಮೊದಲಾದ ಉಪದ್ರವಸಮೂಹವನ್ನು ಶಿಥಿಲಮಾಡುವುದು (ಸದ್ = ಅವಸಾದನ) ಎಂಬ ಅರ್ಥಯೋಗದಿಂದ ಇದು ಉಪನಿಷತ್ ಎನಿಸುತ್ತದೆ. ಇದು ಧಾತುವಿನ ಮೂರನೆಯ ಅರ್ಥ.

ಮೇಲೆ ಹೇಳಿದ ಅರ್ಥವಲ್ಲದೆ ಉಪನಿಷತ್ತಿನಲ್ಲಿ ಪ್ರತಿಪಾದಿಸಲ್ಪಟ್ಟಿರುವ ರಹಸ್ಯಗಳಿಗೂ, ಇದರಿಂದುಂಟಾಗುವ ಬ್ರಹ್ಮಜ್ಞಾನಕ್ಕೂ, ಉಪಾಸಕರು ಅನುಷ್ಠಿಸಬೇಕಾದ ವ್ರತಾದಿನಿಯಮಗಳಿಗೂ ಉಪನಿಷತ್ ಎಂಬ ಪದವು ಪ್ರಯೋಗಿಸಲ್ಪಟ್ಟಿದೆ. ಯಾವ ಅರ್ಥವನ್ನು ಹೇಳಿದರೂ ಉಪನಿಷಚ್ಛಬ್ದಕ್ಕೆ ಬ್ರಹ್ಮವಿದ್ಯೆಯೆಂಬುದೇ ತಾತ್ಪರ್ಯ.

ಮುಕ್ತಿಕೋಪನಿಷತ್ತಿನ ಪ್ರಕಾರ ಉಪನಿಷತ್ತುಗಳ ಸಂಖ್ಯೆ ೧೦೮. ದಾರಾ ಷುಕೋ ಮಾಡಿಸಿದ ಪರ್ಷಿಯನ್ ಭಾಷಾಂತರದಲ್ಲಿ ಐವತ್ತು ಉಪನಿಷತ್ತುಗಳಿವೆ. ಮ್ಯಾಕ್ಸ್ ಮುಲ್ಲರ್ ಮಾಡಿದ ಒಂದು ಅಕಾರಾದಿಪಟ್ಟಿಯ ಪ್ರಕಾರ ಉಪನಿಷತ್ತುಗಳ ಸಂಖ್ಯೆ ೧೪೯. ಡಾಕ್ಟರ್ ಬರ್ನೆಲ್ ಮಹಾಶಯನ ಪಟ್ಟಿಯಲ್ಲಿ ೧೫೪ ಉಪನಿಷತ್ತುಗಳೂ, ಪ್ರೊಫೆಸರ್ ಹೌಗ್‌ರ ಪಟ್ಟಿಯಲ್ಲಿ ೧೭೦ ಉಪನಿಷತ್ತುಗಳೂ ಕಂಡುಬರುತ್ತವೆ. ಇವೆಲ್ಲವೂ ಒಂದೇ ಕಾಲಕ್ಕೆ ಸೇರಿದವಲ್ಲ, ಭಿನ್ನ ಭಿನ್ನ ಕಾಲಕ್ಕೆ ಸೇರಿದುವು. ಸಂಹಿತೆಗಳು ಬ್ರಾಹ್ಮಣಗಳು ಆರಣ್ಯಕಗಳು—ಇವುಗಳಲ್ಲಿ ಸೇರಿದ ಮತ್ತು ಭಗವಾನ್ ಬಾದರಾಯಣರ ವೇದಾಂತಸೂತ್ರಗಳಲ್ಲಿ ಚರ್ಚಿಸಲ್ಪಟ್ಟ ಉಪನಿಷತ್ತುಗಳು ಪ್ರಾಚೀನವೆಂದೂ,

ತತ್ತ್ವದೃಷ್ಟಿಯಿಂದ ಅತಿ ಮುಖ್ಯವೆಂದೂ ಹೇಳಬಹುದು. ಶ್ರೀಮಚ್ಛಂಕರಾಚಾರ್ಯರು ಈಶ ಕೇನ ಕಠ ಪ್ರಶ್ನ ಮುಂಡಕ ಮಾಂಡೂಕ್ಯ ತೈತ್ತಿರೀಯ ಐತರೇಯ ಛಾಂದೋಗ್ಯ ಬೃಹದಾರಣ್ಯಕ ಎಂಬ ದಶೋಪನಿಷತ್ತುಗಳ ಮೇಲೆ ಭಾಷ್ಯಗಳನ್ನು ಬರೆದಿದ್ದಾರೆ. ಆದರೆ ಮಾಂಡೂಕ್ಯಭಾಷ್ಯವು ಅವರದೇ ಎನ್ನುವ ವಿಚಾರದಲ್ಲಿ ಆಧುನಿಕ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳುಂಟು. ಶ್ರೀಮದ್ರಾಮಾನುಜಾಚಾರ್ಯರು ದಶೋಪನಿಷತ್ತುಗಳ ಮೇಲೆ ವ್ಯಾಖ್ಯಾನ ಮಾಡದಿದ್ದರೂ ತಮ್ಮ ವೇದಾರ್ಥಸಂಗ್ರಹದಲ್ಲಿ ಇವುಗಳನ್ನು ಕುರಿತು ಚರ್ಚೆ ಮಾಡಿದ್ದಾರೆ. ಶ್ರೀಮನ್ಮಧ್ವಾಚಾರ್ಯರು ದಶೋಪನಿಷತ್ತುಗಳ ಮೇಲೆ ವ್ಯಾಖ್ಯಾನವನ್ನು ಮಾಡಿದ್ದಾರೆ.

ಈ ಉಪನಿಷತ್ತಿನ ಮೊದಲನೆಯ ಮಂತ್ರವು "ಈಶಾ ವಾಸ್ಯಂ" ಎಂದು ಪ್ರಾರಂಭವಾಗುವುದರಿಂದ ಇದಕ್ಕೆ "ಈಶಾವಾಸ್ಯೋಪನಿಷತ್" ಅಥವಾ "ಈಶೋಪನಿಷತ್" ಎಂದು ಹೆಸರು. ಇದು ಶುಕ್ಲಯಜುರ್ವೇದದ ವಾಜಸನೇಯಸಂಹಿತೆಗೆ (೪೦ನೆಯ ಅಧ್ಯಾಯ) ಸೇರಿದುದರಿಂದ "ವಾಜಸನೇಯ-ಸಂಹಿತೋಪನಿಷತ್" ಎಂದೂ ಕರೆಯುವುದುಂಟು. ಆದರೆ ಸಂಹಿತೆಯ ಪಾಠಕ್ಕೂ ಉಪನಿಷತ್ತಿನ ಪಾಠಕ್ಕೂ ಸ್ವಲ್ಪ ಭೇದ ಉಂಟು. ಈ ಉಪನಿಷತ್ತು ಅತಿ ಮುಖ್ಯವೆಂದು ಗಣಿಸಲ್ಪಟ್ಟಿರುವುದರಿಂದ ಇದರ ಮೇಲೆ ಅನೇಕರು ವ್ಯಾಖ್ಯಾನಮಾಡಿದ್ದಾರೆ. ಆನಂದಾಶ್ರಮದಿಂದ ಪ್ರಕಾಶಿಸಲ್ಪಟ್ಟ ಗ್ರಂಥದಲ್ಲಿ ಆನಂದಗಿರಿಟೀಕೆಯಿಂದ ಕೂಡಿದ ಶಾಂಕರಭಾಷ್ಯವೂ ಉವಟ ಬ್ರಹ್ಮಾನಂದ ಶಂಕರಾನಂದ ರಾಮಚಂದ್ರ ಪಂಡಿತ ಆನಂದಭಟ್ಟೋಪಾಧ್ಯಾಯ ಅನಂತಾಚಾರ್ಯ ಮೊದಲಾದವರ ವಾಖ್ಯಾನಗಳೂ ಇವೆ. ಇವೆಲ್ಲವೂ ಅದ್ವೈತಪರವಾದುವು. ಇತ್ತೀಚೆಗೆ ತಿರುಪತಿ ವೆಂಕಟೇಶ್ವರ ಓರಿಯೆಂಟಲ್ ಸೀರೀಸ್‌ನಲ್ಲಿ ಶ್ರೀವೇದಾಂತದೇಶಿಕರ ಈಶೋಪನಿಷದ್ಭಾಷ್ಯವು ಆಂಗ್ಲಾನುವಾದ ಸಂಸ್ಕೃತ ಟಿಪ್ಪಣಿಗಳೊಂದಿಗೆ ಪ್ರಕಟವಾಗಿದೆ. ದೇಶಿಕರ ಭಾಷ್ಯದ ಮೇಲೆ ಶ್ರೀಕೂರನಾರಾಯಣಸ್ವಾಮಿಗಳೂ ಪುರಿಶೈ ಶ್ರೀರಂಗಾಚಾರ್ಯಸ್ವಾಮಿಗಳೂ ಟೀಕೆಗಳನ್ನು ಬರೆದಿದ್ದಾರೆ.

ಇದು ಬಹಳ ಸಣ್ಣ ಉಪನಿಷತ್ ಆದರೂ ಇದರ ತಾತ್ಪರ್ಯವನ್ನು ಸರಿಯಾಗಿ ತಿಳಿದುಕೊಳ್ಳುವುದು ಕಷ್ಟ. ಮಂತ್ರಗಳ ಅರ್ಥವನ್ನು ತಿಳಿದು

ಕೊಂಡರೂ ಮಂತ್ರಗಳ ಅನ್ಯೋನ್ಯಸಂಬಂಧವನ್ನು ತಿಳಿದುಕೊಳ್ಳುವುದು ಅತ್ಯಂತ ಕಷ್ಟ. ಪ್ರಾಚೀನ ಉಪನಿಷತ್ತುಗಳ ಕಾಲದಲ್ಲಿ ಒಂದು ದೊಡ್ಡ ಚರ್ಚೆ ಎದ್ದಂತೆ ಕಾಣುತ್ತದೆ. ಪುರುಷಾರ್ಥಪ್ರಾಪ್ತಿಗೆ ಯಾವುದು ಉತ್ಕೃಷ್ಟ ಸಾಧನ? ಕರ್ಮವೋ ಜ್ಞಾನವೋ ಅಥವಾ ಇವೆರಡರ ಸಮುಚ್ಚಯವೋ? ಸ್ವರ್ಗಪ್ರಾಪ್ತಿರೂಪವಾದ ಕರ್ಮಫಲವು ಅನಿತ್ಯವಾದುದರಿಂದ ಶುದ್ಧ ಜ್ಞಾನವೇ ಶಾಶ್ವತಮೋಕ್ಷಕ್ಕೆ ಸಾಧನವೆಂದು ಉಪನಿಷತ್ತುಗಳೇ ಸ್ವಯಂ ಒಪ್ಪಿಕೊಂಡಿರುವಂತೆ ಕಾಣುತ್ತದೆ: "ಕರ್ಮವು ಶ್ರೇಯಸ್ಸೆಂದು ಯಾವ ಮೂಢರು ಹಿಗ್ಗುವರೋ ಅವರು ಜರಾಮೃತ್ಯುಗಳನ್ನು ಪುನಃ ಹೊಂದುವರು",[1] "ಕರ್ಮದಿಂದ ಆಗಿರುವ ಲೋಕಗಳನ್ನು ಪರಿಶೀಲಿಸಿ 'ಅಕೃತವಾದದ್ದು ಕೃತದಿಂದ ಆಗುವುದಿಲ್ಲ' ಎಂದು ವೈರಾಗ್ಯವನ್ನು ಹೊಂದಬೇಕು."[2] ಇಲ್ಲಿ ಕರ್ಮವೆಂದರೆ ದೇವತೆಗಳನ್ನು ಉದ್ದೇಶಿಸಿ ಮಾಡಿದ ಯಜ್ಞಕರ್ಮಗಳೆಂಬುದರಲ್ಲಿ ಸಂದೇಹವಿಲ್ಲ. ಲೋಕವ್ಯವಹಾರಗಳಿಗೆ ಕರ್ಮವೆಂದು ಹೇಳಿಲ್ಲ. ಮುಮುಕ್ಷುವು "ಅದೃಢವೂ ಪ್ಲವರೂಪವೂ ಆದ ಹದಿನೆಂಟು ಕರ್ಮಗಳನ್ನು"[3] ಬಿಟ್ಟು ಎಂದರೆ ಗೃಹಸ್ಥಾಶ್ರಮವನ್ನು ತ್ಯಾಗಮಾಡಿ ಬ್ರಹ್ಮವಿದ್ಯೆಗಾಗಿ ಸಂನ್ಯಾಸವನ್ನು ಸ್ವೀಕರಿಸಬೇಕೆಂಬುದು ಕೆಲವು ಉಪನಿಷತ್ತುಗಳ ತಾತ್ಪರ್ಯ. ಇದು ಶ್ರೀಶಂಕರಾಚಾರ್ಯರಿಗೆ ಪ್ರಿಯವಾದ ಮತ. ಅವರು ಈ ದೃಷ್ಟಿಯಿಂದ ಇತರ ಉಪನಿಷತ್ತುಗಳಂತೆಯೇ ಈ ಉಪನಿಷತ್ತಿನ ಮೇಲೂ ವ್ಯಾಖ್ಯಾನ ಮಾಡಿರುತ್ತಾರೆ.

---

[1] ಏತಚ್ಛ್ರೇಯೋ ಯೇಽಭಿನಂದಂತಿ ಮೂಢಾ
ಜರಾಮೃತ್ಯುಂ ತೇ ಪುನರೇವಾಪಿಯಂತಿ ।
ಮುಂಡಕೋಪನಿಷತ್, ೧-೨-೭.

[2] ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ
ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ ।
ಅದೇ, ೧-೨-೧೨.

[3] ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾ
ಅಷ್ಟಾದಶೋಕ್ತಮವರಂ ಯೇಷು ಕರ್ಮ ।
ಅದೇ, ೧-೨-೭.

ಇದಲ್ಲದೆ ಇನ್ನೊಂದು ಅಭಿಪ್ರಾಯವು ಕೆಲವು ಉಪನಿಷತ್ತುಗಳಲ್ಲಿ ಅಂತರ್ಗತವಾಗಿರುವಂತೆ ಕಾಣುತ್ತದೆ. ಇದಕ್ಕೆ ಈಶಾವಾಸ್ಯೋಪನಿಷತ್ತೇ ಒಂದು ನಿದರ್ಶನ. ಜ್ಞಾನರಹಿತವಾದ ಬರಿಯ ಕರ್ಮದಿಂದ ಏನೂ ಪ್ರಯೋಜನವಿಲ್ಲ. ಕರ್ಮವು ಜ್ಞಾನಕ್ಕೆ ಅಂಗವಾಗಿದ್ದರೆ ಅಥವಾ ಸಹಕಾರಿ ಯಾಗಿದ್ದರೆ ಜ್ಞಾನೋತ್ಪತ್ತಿಗೆ ಕಾರಣವಾಗುವುದು. ಈ ದೃಷ್ಟಿಯಿಂದ ಸಾಧಕನು ಫಲಾಸಕ್ತಿಯನ್ನು ಬಿಟ್ಟು ಕರ್ಮವನ್ನು ಅನುಷ್ಠಿಸಿದರೆ ಕರ್ಮದ ಮೂಲಕ ಚಿತ್ತಶುದ್ಧಿಯನ್ನು ಹೊಂದಿ ಅನಂತರ ಜ್ಞಾನದ ದ್ವಾರಾ ನಿಃಶ್ರೇಯ ಸ್ಸನ್ನು ಪಡೆಯುತ್ತಾನೆ. ಕರ್ಮಜ್ಞಾನಗಳಿಗೆ ಇಲ್ಲಿ ಯಾವ ವಿಧವಾದ ವಿರೋಧವಿಲ್ಲ. ಈ ಸಮುಚ್ಚಯಕ್ಕೆ ವಿಷಮಸಮುಚ್ಚಯವೆಂದು ಹೆಸರು. ಕರ್ಮವು ಪ್ರಧಾನವಾದ ಜ್ಞಾನಕ್ಕೆ ಉಪಾಂಗವಾಗಿ ಜ್ಞಾನವನ್ನು ಉಂಟು ಮಾಡಲು ಸಹಕಾರಿಯಾಗುತ್ತದೆ. ಕರ್ಮಕ್ಕೆ ಸ್ವತಂತ್ರವಾಗಿ ಫಲವನ್ನುಂಟು ಮಾಡಲು ಸಾಧ್ಯವಿಲ್ಲ. ಸಮಸಮುಚ್ಚಯದಲ್ಲಿ ಇಂತಹ ಅಂಗಾಂಗಿ ಸಂಬಂಧವಿಲ್ಲದೆ ಕರ್ಮಜ್ಞಾನಗಳು ಸ್ವತಂತ್ರವಾಗಿ ಫಲಕಾರಿಯಾಗುತ್ತವೆ. ಶ್ರೀಮದ್ರಾಮಾನುಜಾಚಾರ್ಯರು ವಿಷಮಸಮುಚ್ಚಯವನ್ನು ಒಪ್ಪಿಕೊಂಡಿ ರುತ್ತಾರೆ. ಇವರ ಮತಾವಲಂಬಿಗಳಾದ ಶ್ರೀದೇಶಿಕರು ಕರ್ಮಜ್ಞಾನಗಳ ವಿರೋಧವನ್ನು ಒಪ್ಪಿಕೊಳ್ಳದೆ ವಿಷಮಸಮುಚ್ಚಯದೃಷ್ಟಿಯಿಂದ ಈಶಾವಾ ಸ್ಯೋಪನಿಷತ್ತಿಗೆ ವ್ಯಾಖ್ಯಾನಮಾಡಿರುತ್ತಾರೆ.

ಶ್ರೀಶಂಕರಾಚಾರ್ಯರ ಮತ್ತು ಶ್ರೀವೇದಾಂತದೇಶಿಕರ ಈಶೋಪ ನಿಷದ್ಭಾಷ್ಯಗಳು ಎರಡು ಮುಖ್ಯ ಮತಗಳ ಪ್ರತಿನಿಧಿಸ್ವರೂಪವಾಗಿರುವುದ ರಿಂದ ಇವರಿಬ್ಬರ ವ್ಯಾಖ್ಯಾನಗಳ ಪ್ರಕಾರ ಈ ಉಪನಿಷತ್ತಿನ ಮಂತ್ರಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಶಾಂಕರಭಾಷ್ಯ

ಈ ವ್ಯಾಖ್ಯಾನದ ಪ್ರಕಾರ ಈಶೋಪನಿಷತ್ತಿನ ಏಳು ಮಂತ್ರಗಳು (೧ ಮತ್ತು ೩ರಿಂದ ೮) ಮಾತ್ರ ಪರಬ್ರಹ್ಮನ ಸ್ವರೂಪವನ್ನು ನಿರೂಪಿಸುತ್ತವೆ. ಇತರ ಮಂತ್ರಗಳು ಆತ್ಮವನ್ನು ಅರಿಯದ ಅಜ್ಞಾನಿಗಳಿಗೆ ಅನ್ವಯಿಸುತ್ತವೆ. ಇವರು ದೃಷ್ಟಾದೃಷ್ಟಭೋಗ ಗಳನ್ನು ಹೊಂದಬೇಕೆಂಬ ಆಶೆಯಿಂದ ಸಂಸಾರದಲ್ಲಿ ಆಸಕ್ತರಾಗಿ ಯಜ್ಞಯಾಗಗಳ ಅನುಷ್ಠಾನದಲ್ಲಿ ಅಥವಾ ದೇವತೆಗಳ ಉಪಾಸನೆಯಲ್ಲಿ ನಿರತರಾಗಿರುತ್ತಾರೆ.

೧. ಮೊದಲನೆಯ ಮಂತ್ರವು ಆತ್ಮನ ಅದ್ವೈತಸ್ವರೂಪವನ್ನು ನಿರೂಪಿಸಿ ಆತ್ಮನಲ್ಲಿ ಅಧ್ಯಸ್ತವಾಗಿರುವ ಕರ್ತೃತ್ವಭೋಕ್ತೃತ್ವಾದಿಲಕ್ಷಣಗಳಿಂದ ಕೂಡಿದ ದ್ವೈತರೂಪವಾದ ಜಗತ್ತು ಮಿಥ್ಯೆಯೆಂದು ಉಪದೇಶಿಸುತ್ತೆ.

೨. ಮೇಲೆ ಹೇಳಿದಂತೆ ಆತ್ಮನನ್ನು ಅರಿತುಕೊಳ್ಳಲು ಶಕ್ತಿಯಿಲ್ಲದವನಿಗೆ ಎರಡನೆಯ ಮಂತ್ರವು ಕರ್ಮನಿಷ್ಠೆಯನ್ನು ಉಪದೇಶಮಾಡಿದೆ.

೩. ಮೂರನೆಯ ಮಂತ್ರವು ಅಜ್ಞಾನಿಗಳನ್ನು ನಿಂದಿಸಿದೆ.

೪. ನಾಲ್ಕನೆಯ ಮಂತ್ರವು ಆತ್ಮತತ್ತ್ವವನ್ನು ವಿವರಿಸಿದೆ.

೫. ಐದನೆಯ ಮಂತ್ರವು ಹಿಂದಿನ ಮಂತ್ರದ ಅರ್ಥವನ್ನೇ ವಿವರಿಸಿದೆ.

೬. ಶುದ್ಧವಾದ ಒಂದೇ ಆತ್ಮವನ್ನು ನೋಡುವವನಿಗೆ ನಿಂದಿಸಲು ಕಾರಣವಾದ ಬೇರೆ ಯಾವ ವಸ್ತುವೂ ಇರುವುದಿಲ್ಲ. ಅನುಭವಸಿದ್ಧವಾದ ಮಾತನ್ನೇ ಇಲ್ಲಿ ಶ್ರುತಿಯು ಹೇಳಿದೆ ಎಂದು ಆರನೆಯ ಮಂತ್ರದ ಅರ್ಥ.

೭. ಏಳನೆಯ ಮಂತ್ರವು ಹಿಂದಿನ ಮಂತ್ರದ ಅಭಿಪ್ರಾಯವನ್ನೇ ಹೇಳಿದೆ.

೮. ಎಂಟನೆಯ ಮಂತ್ರವು ಪರಬ್ರಹ್ಮದ ಸ್ವರೂಪವನ್ನು ವಿವರಿಸಿದೆ.

೯-೧೧. ಈ ಮೂರು ಮಂತ್ರಗಳು ಒಂದು ಗುಂಪಿಗೆ ಸೇರಿದುವು. ಅವಿದ್ಯೆಯೆಂದರೆ ಅಗ್ನಿಹೋತ್ರಾದಿ ವೈದಿಕಕರ್ಮಗಳು. ವಿದ್ಯೆಯೆಂದರೆ ಕರ್ಮವಿಹೀನವಾದ ದೇವತಾವಿಷಯಕ ಜ್ಞಾನ. ಅವಿದ್ಯೋಪಾಸನೆಯ ಮೂಲಕ ಪಿತೃಲೋಕವನ್ನೂ ವಿದ್ಯೋಪಾಸನೆಯ ಮೂಲಕ ದೇವಲೋಕವನ್ನೂ ಕರ್ಮೋಪಾಸಕರು ಹೊಂದುತ್ತಾರೆ. ಆಪೇಕ್ಷಿಕವಾದ ಅಮೃತತ್ವವನ್ನು ಪಡೆಯಲು ಕರ್ಮಜ್ಞಾನಗಳ ಸಮುಚ್ಚಯವು ಸುಲಭ ಸಾಧನವೆಂದು ಹನ್ನೊಂದನೆಯ ಮಂತ್ರದಲ್ಲಿ ಸೂಚಿಸಿದೆ.

೧೨-೧೪. ಈ ಮೂರು ಮಂತ್ರಗಳು ಎರಡನೆಯ ಗುಂಪಿಗೆ ಸೇರಿದುವು. 'ಅಸಂಭೂತಿ' ಎಂದರೆ ಅವ್ಯಾಕೃತವೆಂಬ ಹೆಸರಿನ ಪ್ರಕೃತಿ. 'ಸಂಭೂತಿ'ಯೆಂದರೆ ಹಿರಣ್ಯಗರ್ಭನೆಂಬ ಕಾರ್ಯಬ್ರಹ್ಮ. ಸಂಭೂತಿ-ಅಸಂಭೂತಿಗಳ ಧ್ಯಾನದ ಫಲವು ಬೇರೆಯಾಗಿರುವುದರಿಂದ ಆ ಎರಡು ಉಪಾಸನೆಗಳನ್ನೂ ಸೇರಿಸಬೇಕೆಂದು ಹದಿನಾಲ್ಕನೆಯ ಮಂತ್ರವು ಉಪದೇಶಿಸುತ್ತದೆ. ಈ ಮಂತ್ರದಲ್ಲಿ ಮೊದಲನೆಯ ಪದವಾದ 'ಸಂಭೂತಿ' ಎಂಬುದನ್ನು 'ಅಸಂಭೂತಿ' ಎಂದು ಗ್ರಹಿಸಬೇಕೆಂದೂ 'ವಿನಾಶ' ಎಂಬುದನ್ನು 'ಸಂಭೂತಿ' ಎಂದು ಗ್ರಹಿಸಬೇಕೆಂದೂ ಹೇಳಿದ್ದಾರೆ.

೧೫-೧೮. ಏಷಣಗಳನ್ನು ಬಿಡದೆ ಜನ್ಮದಿಂದ ಮರಣದ ವರೆಗೆ ಕರ್ಮಮಾರ್ಗದಲ್ಲಿ ಪ್ರವೃತ್ತನಾಗಿ ಅಪರಬ್ರಹ್ಮವನ್ನು ಉಪಾಸಿಸುತ್ತಿರುವ ಸಾಧಕನು ಯಾವ ಮಾರ್ಗದ ಮೂಲಕ ಆಪೇಕ್ಷಿಕವಾದ ಅಮೃತತ್ವವನ್ನು ಹೊಂದುವನೆಂದು ಈ ನಾಲ್ಕು ಮಂತ್ರಗಳಲ್ಲಿ ಹೇಳಿದೆ. ಮರಣಕಾಲವು ಒದಗಿದಾಗ ಉಪಾಸಕನು ಈ ರೀತಿ ಪ್ರಾರ್ಥನೆ ಮಾಡುತ್ತಾನೆ.

ವೇದಾಂತದೇಶಿಕರ ಭಾಷ್ಯ

ಈ ವ್ಯಾಖ್ಯಾನದ ಪ್ರಕಾರ ಮೊದಲನೆಯ ಮತ್ತು ಎರಡನೆಯ ಮಂತ್ರಗಳು ಒಂದನೆಯ ಗುಂಪಿಗೂ, ೩ರಿಂದ ೮ರ ವರೆಗಿನ ಮಂತ್ರಗಳು ಎರಡನೆಯ ಗುಂಪಿಗೂ, ೯ರಿಂದ ೧೪ನೆಯ ವರೆಗಿನ ಮಂತ್ರಗಳು ಮೂರನೆಯ ಗುಂಪಿಗೂ, ಕೊನೆಯ ನಾಲ್ಕು ಮಂತ್ರಗಳು ನಾಲ್ಕನೆಯ ಗುಂಪಿಗೂ ಸೇರಿವೆ.

೧. ಎಲ್ಲ ವಸ್ತುಗಳ ಸ್ವರೂಪಸ್ಥಿತಿಪ್ರವೃತ್ತಿಗಳು ಪರಮಪುರುಷನನ್ನು ಆಶ್ರಯಿಸಿರುವಂತೆ ಜೀವನು ಈಶ್ವರನ ಶೇಷನು ಎಂದು ಮೊದಲನೆಯ ಮಂತ್ರವು ಉಪದೇಶಿಸುತ್ತೆ.

೨. ಕರ್ಮತ್ಯಾಗವನ್ನು ಮಾಡದೆ ಫಲಸಂಗಾದಿಗಳನ್ನು ಬಿಟ್ಟು ನಿತ್ಯನೈಮಿತ್ತಿಕ ಕರ್ಮಗಳನ್ನು ಯಾವಜ್ಜೀವವೂ ಭಗವತ್ಪ್ರೀತಿಗಾಗಿ ಮಾಡಬೇಕೆಂಬುದು ಎರಡನೆಯ ಮಂತ್ರದ ಅರ್ಥ.

೩. ಆಸುರೀಸ್ವಭಾವದ ಜನರ ಜ್ಞಾನಕರ್ಮಗಳು ಹುಸಿಯಾಗಿ ಅವರು ಅಧೋಗತಿಯನ್ನು ಹೊಂದುತ್ತಾರೆ.

೪-೫. ಈಶ್ವರತತ್ತ್ವವು ವಿಚಿತ್ರಶಕ್ತಿಯಿಂದ ಕೂಡಿದೆ ಎಂಬುದನ್ನು ಪರಸ್ಪರ ವಿರುದ್ಧಾರ್ಥವುಳಂತೆ ಕಾಣುವ ಶಬ್ದಗಳಿಂದ ಈ ಎರಡು ಮಂತ್ರಗಳು ತಿಳಿಸುತ್ತವೆ.

೬-೭. ಬ್ರಹ್ಮದ ವ್ಯಾಪಕತ್ವವನ್ನು ಒಳಗೂ ಹೊರಗೂ ನೋಡುವವನಿಗೆ ಶೋಕಮೋಹಗಳು ಇಲ್ಲವೆಂದು ಈ ಎರಡು ಮಂತ್ರಗಳು ಹೇಳುತ್ತವೆ.

೮. ತಿಳಿದುಕೊಳ್ಳಬೇಕಾದ ವಸ್ತುವಿನ ವಿಶೇಷಗುಣಗಳ ದ್ವಾರಾ ಈ ಮಂತ್ರವು ಜೀವೇಶ್ವರಸ್ವರೂಪವನ್ನು ತಿಳಿದ ಉಪಾಸಕನನ್ನು ವಿವರಿಸುತ್ತದೆ.

೯-೧೧. ವಿದ್ಯೆ ಎಂದರೆ ಪರಮಾತ್ಮನ ಉಪಾಸನಾರೂಪವಾದ ಜ್ಞಾನ. ಅವಿದ್ಯೆ ಎಂದರೆ ಜ್ಞಾನರಹಿತವಾದ ಕೇವಲ ಕರ್ಮ. ಉಪಾಸನಾರೂಪವಾದ ಜ್ಞಾನವನ್ನೂ ಉಪಾಸನೆಗೆ ಅಂಗವಾದ ಕರ್ಮವನ್ನೂ ಒಟ್ಟುಗೂಡಿಸಿ ಅನುಷ್ಠಾನಮಾಡಬೇಕೆಂಬುದು ಈ ಮಂತ್ರಗಳ ತಾತ್ಪರ್ಯ.

೧೨-೧೪. ಈ ಮೂರು ಮಂತ್ರಗಳಲ್ಲಿ ಪ್ರತಿಬಂಧನಿವೃತ್ತಿರೂಪವಾದ ಫಲಸಾಧನೆಗಳ ಧ್ಯಾನವನ್ನು ಜ್ಞಾನದ ಅಂಗವಾಗಿ ಅನುಸಂಧಾನಮಾಡಬೇಕೆಂದು ಹೇಳಿದೆ. "ಸಂಭೂತಿ" ಎಂದರೆ ಬ್ರಹ್ಮಪ್ರಾಪ್ತಿಯ ಒಂದು ರೂಪ. "ಅಸಂಭೂತಿ" ಎಂದರೆ ಪ್ರತಿಬಂಧಕನಿವೃತ್ತಿ; ಅಥವಾ ಸಮಾಧಿನಿಷ್ಪತ್ತಿ ಮತ್ತು ಅಹಂಕಾರದಂಭಾದಿಗಳ ನಾಶ. ಸಂಭೂತಿ-ಅಸಂಭೂತಿಗಳ ಪ್ರತ್ಯೇಕ ಧ್ಯಾನವನ್ನು ನಿಂದಿಸಿ ಅವುಗಳ ಸಮುಚ್ಚಯಾನುಷ್ಠಾನವು ಆವಶ್ಯಕವೆಂಬುದನ್ನು ಈ ಮಂತ್ರಗಳು ತಿಳಿಸಿವೆ.

೧೫-೧೮. ಬ್ರಹ್ಮವಿದ್ಯೆಯನ್ನು ಅಂಗಗಳೊಂದಿಗೆ ಅನುಷ್ಠಾನಮಾಡುತ್ತಿರುವ ಸಾಧಕನು ಫಲಪ್ರಾಪ್ತಿಯ ವರೆಗೂ ಅನುಸಂಧಾನಮಾಡಬೇಕಾದ ಮಂತ್ರಗಳನ್ನು ಈ ಗುಂಪು ಉಪದೇಶಿಸುತ್ತೆ. ಸಮಾಧಿಯ ಪ್ರತಿಬಂಧಕಗಳ ನಿವಾರಣೆಗಾಗಿ ಉಪಾಸಕನು ಭಗ

ವಂತನನ್ನು ಪ್ರಾರ್ಥಿಸುತ್ತಾನೆ (೧೫ನೆಯ ಮಂತ್ರ). ತಾನು ಏನಾದರೂ ಒಳ್ಳೆಯದನ್ನು ಮಾಡಿದ್ದರೆ ಅದನ್ನು ಸ್ಮರಿಸಿಕೊಂಡು ತನ್ನನ್ನು ಕಾಪಾಡಬೇಕೆಂದು ೧೬-೧೭ನೆಯ ಮಂತ್ರಗಳಲ್ಲಿ ಕೇಳಿಕೊಂಡಿದೆ. ತಾನು ಅಪೇಕ್ಷಿಸಿದುದನ್ನು ಅನುಗ್ರಹಿಸಲೆಂದು ಅಗ್ನಿಶಬ್ದ ವಾಚ್ಯನಾದ ಭಗವಂತನನ್ನು ಉಪಾಸಕನು ಪ್ರಾರ್ಥಿಸುತ್ತಾನೆ (೧೮ನೆಯ ಮಂತ್ರ).

ನಿತ್ಯಕರ್ಮ-ಬ್ರಹ್ಮವಿದ್ಯೆಗಳಲ್ಲಿ ಯಾವ ವಿಧವಾದ ಭೇದವನ್ನೂ ಕಲ್ಪಿಸದೆ ಸಮವಾಗಿ ಅನುಷ್ಠಾನಮಾಡುವುದೇ ಈಶೋಪನಿಷತ್ತಿನ ವಿಶೇಷೋಪದೇಶ. ಕಾಮ್ಯಕರ್ಮಗಳನ್ನು ತ್ಯಜಿಸಿ ಈಶ್ವರಸೇವೆಗಾಗಿ ಮತ್ತು ಲೋಕಸಂಗ್ರಹಕ್ಕಾಗಿ ನಿತ್ಯಕರ್ಮಗಳನ್ನು ಮಾಡುತ್ತ ನೂರು ವರ್ಷ ಬಾಳಲು ಇಚ್ಛಿಸಬೇಕು. ಉಪಾಸಕನು ಜ್ಞಾನಕ್ಕೆ ಸಹಾಯವಾಗುವ ಕರ್ಮಗಳನ್ನೇ ಮಾಡುವುದರಿಂದ ಕರ್ಮದ ಸ್ವಾಭಾವಿಕದೋಷಗಳು ಅವನಿಗೆ ಅಂಟವು. ಎಲ್ಲವೂ ಈಶನಿಗೆ ಸೇರಿದೆ ಎಂಬ ಜ್ಞಾನದಿಂದ ನಿರ್ಮಮತ್ವವು ಸಿದ್ಧಿಸಿದರೆ ಶೋಕವೆಲ್ಲಿ? ಮೋಹವೆಲ್ಲಿ? ಇದು ಈ ಉಪನಿಷತ್ತಿನ ಸಾರ.

ಮೊದಲನೆಯ ಭಾಗದಲ್ಲಿ ಮೂಲದೊಂದಿಗೆ ಶಾಂಕರಭಾಷ್ಯಾನುಸಾರವಾಗಿ ಪ್ರತಿಪದಾರ್ಥ-ತಾತ್ಪರ್ಯ-ಟಿಪ್ಪಣಿಗಳನ್ನು ಕೊಟ್ಟು ಎರಡನೆಯ ಭಾಗದಲ್ಲಿ ವೇದಾಂತದೇಶಿಕರ ವ್ಯಾಖ್ಯಾನುಸಾರವಾಗಿ ತಾತ್ಪರ್ಯಟಿಪ್ಪಣಿಗಳನ್ನು ಕೊಟ್ಟಿದೆ.

ಶ್ರೀರಾಮಕೃಷ್ಣಾಶ್ರಮ
ಮಂಗಳೂರು

ಸ್ವಾಮಿ ಆದಿದೇವಾನಂದ

ಈಶಾವಾಸ್ಯೋಪನಿಷತ್

(ವಾಜಸನೇಯ-ಸಂಹಿತೋಪನಿಷತ್)

ಶಾಂತಿಪಾಠ

ಹರಿಃ ಓಂ

ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ ॥

ಓಂ ಶಾಂತಿಃ ಶಾಂತಿಃ ಶಾಂತಿಃ

ಅದಃ=ಅದು ಪೂರ್ಣಂ=ಪೂರ್ಣವು ಇದಂ=ಇದು ಪೂರ್ಣಂ=ಪೂರ್ಣವು ಪೂರ್ಣಾತ್=ಪೂರ್ಣದಿಂದ ಪೂರ್ಣಂ=ಪೂರ್ಣವು ಉದಚ್ಯತೇ=ಹೊರಟು ಬಂದಿದೆ ಪೂರ್ಣಸ್ಯ=ಪೂರ್ಣದ ಪೂರ್ಣಂ=ಪೂರ್ಣವನ್ನು ಆದಾಯ=ತೆಗೆದ ಮೇಲೆ ಪೂರ್ಣಂ ಏವ=ಪೂರ್ಣವೇ ಅವಶಿಷ್ಯತೇ=ಉಳಿಯುತ್ತದೆ.

ಹರಿಃ ಓಂ

ಅದು (ಪರಬ್ರಹ್ಮವು) ಪೂರ್ಣವು, ಇದು (ವ್ಯಕ್ತವಾದ ಜಗತ್ತು) ಪೂರ್ಣವು; ಪೂರ್ಣದಿಂದ(ಪರಬ್ರಹ್ಮದಿಂದ) ಪೂರ್ಣವು(ಜಗತ್ತು) ಹೊರಟು ಬಂದಿದೆ; ಪೂರ್ಣದ (ಜಗತ್ತಿನ) ಪೂರ್ಣತ್ವವನ್ನು (ಬ್ರಹ್ಮತ್ವವನ್ನು) ತೆಗೆದ ಮೇಲೆ (ಗ್ರಹಿಸಿದ ಮೇಲೆ) ಪೂರ್ಣವೇ (ಪರಬ್ರಹ್ಮವೇ) ಉಳಿಯುತ್ತದೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ಈಶಾವಾಸ್ಯೋಪನಿಷತ್

ಈಶಾ ವಾಸ್ಯಮಿದಂ ಸರ್ವಂ
ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ
ಮಾ ಗೃಧಃ ಕಸ್ಯ ಸ್ವಿದ್ಧನಮ್ ॥ ೧ ॥

ಜಗತ್ಯಾಂ=ಜಗತ್ತಿನಲ್ಲಿ ಯತ್ ಕಿಂಚ=ಏನೇನು ಜಗತ್=ಚಲನಾತ್ಮಕವಾದದ್ದು (ಅಸ್ತಿ=ಇದೆಯೋ) ಇದಂ ಸರ್ವಂ=ಇದೆಲ್ಲವೂ ಈಶಾ=ಈಶನಿಂದ ವಾಸ್ಯಂ=ಮುಚ್ಚಲ್ಪಡತಕ್ಕದ್ದು ತೇನ ತ್ಯಕ್ತೇನ=ಅದರ ತ್ಯಾಗದಿಂದ ಭುಂಜೀಥಾಃ=ಕಾಪಾಡಿಕೊ ಕಸ್ಯ ಸ್ವಿತ್=ಯಾರ ಧನಂ=ಧನವನ್ನು ಮಾ ಗೃಧಃ=ಬಯಸಬೇಡ.

೧. (ಈ) ಜಗತ್ತಿನಲ್ಲಿ ಚಲನಾತ್ಮಕವಾದದ್ದು ಏನೇನಿದೆಯೋ ಇದೆಲ್ಲವೂ ಈಶನಿಂದ[1] ಮುಚ್ಚಲ್ಪಡತಕ್ಕದ್ದು.[2] ಅದರ ತ್ಯಾಗದಿಂದ (ನಿನ್ನನ್ನು) ಕಾಪಾಡಿಕೊ.[3] ಯಾರ[4] ಧನವನ್ನೂ ಬಯಸಬೇಡ.

[ಆತ್ಮನನ್ನು ಅರಿತಿರುವವನು ಪುತ್ರನೇ ಮೊದಲಾದ ಏಷಣಾತ್ರಯವನ್ನು ಬಿಟ್ಟು ಆತ್ಮಜ್ಞಾನನಿಷ್ಠೆಯ ಮೂಲಕ ತನ್ನನ್ನು ರಕ್ಷಿಸಿಕೊಳ್ಳಬೇಕೆಂದು ಈ ಮಂತ್ರದಲ್ಲಿ ಹೇಳಿದೆ.

1 ಪರಮೇಶ್ವರನಿಂದ ಅಥವಾ ಪರಮಾತ್ಮನಿಂದ; ಪರಮಾತ್ಮನು ಪ್ರತ್ಯಗಾತ್ಮರೂಪದಿಂದ ಸರ್ವಪ್ರಾಣಿಗಳ ಆತ್ಮನಾಗಿ ಎಲ್ಲವನ್ನೂ ಆಳುತ್ತಿರುವನು.

2 ಚಂದನಕ್ಕೆ ನೀರಿನ ಸಂಬಂಧದಿಂದ ಉಂಟಾಗುವ ದುರ್ಗಂಧವು ಗಂಧದ ಮರದ ತುಂಡನ್ನು ಕಲ್ಲಿನ ಮೇಲೆ ಉಜ್ಜುವುದರಿಂದ ಉಂಟಾಗುವ ಸ್ವಾಭಾವಿಕ ಸುಗಂಧದಿಂದ ಮುಚ್ಚಲ್ಪಡುವಂತೆ ಆತ್ಮನಲ್ಲಿ ಅಧ್ಯಸ್ತವಾಗಿರುವ ಅನಿತ್ಯವೂ ದ್ವೈತರೂಪವೂ ಆದ ಜಗತ್ತು ಆತ್ಮಭಾವನೆಯಿಂದ ಬಿಟ್ಟುಹೋಗುವುದು.

3 ಸರ್ವಸಂಗಪರಿತ್ಯಾಗದಿಂದ ಆತ್ಮರಕ್ಷಣೆಯು ಸಾಧ್ಯವೇ ವಿನಾ ವಿಷಯಭೋಗದಿಂದ ಸಾಧ್ಯವಲ್ಲ.

4 ಮತ್ತೊಬ್ಬನ ಅಥವಾ ತನ್ನ.]

ಕುರ್ವನ್ನೇವೇಹ ಕರ್ಮಾಣಿ
ಜಿಜೀವಿಷೇಚ್ಛತಂ ಸಮಾಃ ।
ಏವಂ ತ್ವಯಿ ನಾನ್ಯಥೇತೋಽಸ್ತಿ
ನ ಕರ್ಮ ಲಿಪ್ಯತೇ ನರೇ ॥ ೨ ॥

ಇಹ=ಈ ಜಗತ್ತಿನಲ್ಲಿ **ಕರ್ಮಾಣಿ**=ಕರ್ಮಗಳನ್ನು **ಕುರ್ವನ್ ಏವ**=ಮಾಡುತ್ತಲೇ **ಶತಂ**=ನೂರು **ಸಮಾಃ**=ವರ್ಷಗಳು **ಜಿಜೀವಿಷೇತ್**=ಜೀವಿಸಲು ಇಚ್ಛೆಪಡಬೇಕು **ಏವಂ**=ಹೀಗೆ **ನರೇ ತ್ವಯಿ**=ಮನುಷ್ಯನಾದ ನಿನಗೆ **ಇತಃ**=ಇದಕ್ಕಿಂತ **ಅನ್ಯಥಾ**=ಭಿನ್ನವಾದ(ಉಪಾಯ) **ನ ಅಸ್ತಿ**=ಇಲ್ಲ[**ಯೇನ**=ಯಾವುದರಿಂದ] **ಕರ್ಮ**=ಕರ್ಮವು **ನ ಲಿಪ್ಯತೇ**=(ನಿನಗೆ) ಅಂಟುವುದಿಲ್ಲ.

೨. ಈ ಲೋಕದಲ್ಲಿ (ಶಾಸ್ತ್ರವಿಹಿತವಾದ) ಕರ್ಮಗಳನ್ನು ಮಾಡುತ್ತಲೇ ನೂರು ವರ್ಷ ಜೀವಿಸಲು ಇಚ್ಛೆಪಡಬೇಕು. ಹೀಗಿರುವ ಮನುಷ್ಯನಾದ ನಿನಗೆ (ಅಶುಭ)ಕರ್ಮವು ಅಂಟಿಕೊಳ್ಳದ (ಉಪಾಯವು) ಬೇರೆ[1] ಯಾವುದೂ ಇಲ್ಲ.

[ಅನಾತ್ಮಜ್ಞನಾಗಿ ಆತ್ಮನನ್ನು ಅರಿತುಕೊಳ್ಳಲು ಶಕ್ತಿಯಿಲ್ಲದವನಿಗೆ ಈ ಮಂತ್ರವು ಕರ್ಮನಿಷ್ಠೆಯನ್ನು ಉಪದೇಶಮಾಡಿದೆ.

[1] ಶಾಸ್ತ್ರವಿಹಿತವಾದ ಕರ್ಮಕ್ಕಿಂತ ಬೇರೆ.]

ಅಸುರ್ಯಾ ನಾಮ ತೇ ಲೋಕಾ
ಅಂಧೇನ ತಮಸಾವೃತಾಃ ।
ತಾಂಸ್ತೇ ಪ್ರೇತ್ಯಾಭಿಗಚ್ಛಂತಿ
ಯೇ ಕೇ ಚಾತ್ಮಹನೋ ಜನಾಃ ॥ ೩ ॥

ಅಸುರ್ಯಾಃ ನಾಮ=ಅಸುರಸಂಬಂಧವುಳ್ಳ **ತೇ ಲೋಕಾಃ**=ಆ ಲೋಕಗಳು **ಅಂಧೇನ ತಮಸಾ**=ಕುರುಡುಗತ್ತಲೆಯಿಂದ **ಆವೃತಾಃ**=ಆವರಿಸಲ್ಪಟ್ಟಿವೆ **ಯೇ ಕೇ ಚ**=ಯಾರು ಯಾರು **ಆತ್ಮಹನಃ ಜನಾಃ**=ಆತ್ಮಘಾತಿಗಳಾದ ಜನರೋ **ತೇ**=ಅವರು **ಪ್ರೇತ್ಯ**=ಮೃತಿಹೊಂದಿ **ತಾನ್**=ಅವುಗಳನ್ನು **ಅಭಿಗಚ್ಛಂತಿ**=ಸೇರುತ್ತಾರೆ, ಪಡೆಯುತ್ತಾರೆ.

೩. ಅಸುರಸಂಬಂಧವುಳ್ಳ[1] ಆ ಲೋಕಗಳು[2] ಕುರುಡುಗತ್ತಲೆಯಿಂದ ಆವರಿಸಲ್ಪಟ್ಟಿವೆ.[3] ಆತ್ಮಘಾತಿಗಳಾದ[4] ಜನರು ಮೃತಿಹೊಂದಿದ ಮೇಲೆ ಅವುಗಳನ್ನು ಪಡೆಯುತ್ತಾರೆ.

[[1] 'ಅಸುರ್ಯಾಃ' ಎಂದರೆ ಕೇವಲ ಅಸುರರ ಅಥವಾ ರಾಕ್ಷಸರ ಲೋಕಗಳಲ್ಲ. ಅದ್ವಯವಾದ ಪರಮಾತ್ಮಭಾವದ ದೃಷ್ಟಿಯಿಂದ ಅನಾತ್ಮಜ್ಞರಾದ ದೇವತೆಗಳನ್ನೂ ಕೂಡ ಅಸುರರೆಂದೇ ಪರಿಗಣಿಸಬೇಕು. ಅಂತಹವರ ಸ್ಥಾನಗಳು ಅಥವಾ ಜನ್ಮಗಳು ಅಸುರ್ಯವೆನಿಸುವುವು.

[2] ಕರ್ಮಫಲಗಳಾದ ಜನ್ಮಗಳು.

3 ಆತ್ಮವು ಕಾಣದಿರುವ ಅಜ್ಞಾನವೆಂಬ ಕತ್ತಲೆಯಿಂದ ಆಚ್ಛಾದಿತವಾಗಿವೆ.
4 ಆತ್ಮವನ್ನು ಅರಿಯದ ಜನರು.]

ಅನೇಜದೇಕಂ ಮನಸೋ ಜವೀಯೋ
ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್ ।
ತದ್ಧಾವತೋಽನ್ಯಾನತ್ಯೇತಿ ತಿಷ್ಠತ್
ತಸ್ಮಿನ್ನಪೋ ಮಾತರಿಶ್ವಾ ದಧಾತಿ ॥ ೪ ॥

(ತತ್=ಆ ಆತ್ಮವು) ಅನೇಜತ್=ಅಚಲವು ಏಕಂ=ಒಂದೇ ಮನಸಃ=ಮನಸ್ಸಿಗಿಂತ ಜವೀಯಃ=ವೇಗವುಳ್ಳದ್ದು ದೇವಾಃ=ಇಂದ್ರಿಯಗಳು ಏನತ್=ಇದನ್ನು ನ ಆಪ್ನುವನ್=ಪಡೆಯಲಿಲ್ಲ ಪೂರ್ವಂ=ಮುಂದೆ ಅರ್ಷತ್=ಹೋಗಿರುತ್ತದೆ ತತ್=ಅದು ತಿಷ್ಠತ್=ನಿಂತುಕೊಂಡೇ ಧಾವತಃ=ಓಡುತ್ತಿರುವ ಅನ್ಯಾನ್=ಇತರರನ್ನು ಅತ್ಯೇತಿ=ದಾಟುತ್ತದೆ ತಸ್ಮಿನ್(ಸತಿ)=ಅದು(ಇರುವಾಗ) ಮಾತರಿಶ್ವಾ=ವಾಯುವು ಅಪಃ=ಕಾರ್ಯಸಮೂಹವನ್ನು ದಧಾತಿ=ಧರಿಸುತ್ತದೆ, ನಡಸುತ್ತದೆ.

೪. (ಆ ಆತ್ಮವು) ಅಚಲವು,[1] (ಸರ್ವಪ್ರಾಣಿಗಳಲ್ಲಿಯೂ) ಒಂದೇ; ಅದು ಮನಸ್ಸಿಗಿಂತ ವೇಗವುಳ್ಳದ್ದು. ಪೂರ್ವಗಾಮಿಯಾದ ಇದನ್ನು ಇಂದ್ರಿಯಗಳೂ ಪಡೆಯಲಿಲ್ಲ.[2] ಅದು ನಿಂತುಕೊಂಡೇ ಓಡುತ್ತಿರುವ ಇತರ (ವಸ್ತುಗಳನ್ನು)[3] ದಾಟುತ್ತದೆ. ಅದು (ಇರುವಾಗ) ವಾಯುವು[4] (ಪ್ರಾಣಿಗಳ) ಕಾರ್ಯಗಳನ್ನು ನಡಸುತ್ತದೆ.

[ಸರ್ವವ್ಯಾಪಿಯೂ ಸರ್ವಸಂಸಾರಧರ್ಮರಹಿತವೂ ನಿಷ್ಕ್ರಿಯವೂ ಆದ ಆತ್ಮತತ್ತ್ವವು ಉಪಾಧಿಯ ದೆಸೆಯಿಂದ ಸಂಸಾರದ ವಿಕ್ರಿಯೆಗಳನ್ನು ಅನುಭವಿಸುತ್ತಿರುವಂತೆಯೂ, ಒಂದೊಂದು ದೇಹಕ್ಕೂ ಒಂದೊಂದು ಆತ್ಮವಿರುವಂತೆಯೂ ಅವಿವೇಕಿಗಳಿಗೆ ತೋರುತ್ತದೆಂದು ಈ ಮಂತ್ರದಲ್ಲಿ ಹೇಳಿದೆ.

1 ತನ್ನ ಸ್ವರೂಪವನ್ನು ಬಿಡದೆ ಯಾವಾಗಲೂ ಒಂದೇ ರೂಪವಾಗಿರುವುದು.

2 ಇಂದ್ರಿಯಗಳ ಕಾರ್ಯಗಳು ಮನಸ್ಸನ್ನು ಅವಲಂಬಿಸಿಯೇ ಆಗಬೇಕಾಗಿವೆ. ಮನಸ್ಸಿಗಿಂತ ವೇಗವುಳ್ಳ ಆತ್ಮವು ಇಂದ್ರಿಯಗಳಿಗಿಂತ ವೇಗವುಳ್ಳದ್ದೆಂದು ಹೇಳಬೇಕಾಗಿಲ್ಲ.

3 ಮನಸ್ಸು ವಾಕ್ಕು ಇಂದ್ರಿಯ ಮೊದಲಾದುವುಗಳನ್ನು.

4 ಅಂತರಿಕ್ಷದಲ್ಲಿ ಚಲಿಸುವುದರಿಂದ (ಮಾತರಿ ಶ್ವಯತಿ) ವಾಯುವಿಗೆ ಮಾತರಿಶ್ವನೆಂದು ಹೆಸರು. ವಾಯುವು ಪ್ರಾಣರೂಪದಿಂದ ಸಮಸ್ತ ಜೀವಿಗಳ ದೇಹೇಂದ್ರಿಯ ಕ್ರಿಯೆಗಳನ್ನು ನಡಸುತ್ತದೆ. ಆತ್ಮಚೈತನ್ಯವಿಲ್ಲದಿದ್ದರೆ ಪ್ರಾಣಕ್ಕೆ ಈ ಕಾರ್ಯವು ಸಾಧ್ಯವಾಗುತ್ತಿರಲಿಲ್ಲ.]

ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ ।
ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥ ೫ ॥

ತತ್=ಅದು ಏಜತಿ=ಚಲಿಸುತ್ತದೆ ತತ್=ಅದು ನ ಏಜತಿ=ಚಲಿಸುವುದಿಲ್ಲ ತತ್=ಅದು ದೂರೇ=ದೂರದಲ್ಲಿ(ರುವುದು) ತತ್ ಉ=ಅದು ಅಂತಿಕೇ=ಹತ್ತಿರದಲ್ಲಿ (ರುವುದು) ತತ್=ಅದು ಅಸ್ಯ=ಈ ಸರ್ವಸ್ಯ=ಎಲ್ಲದರ ಅಂತಃ=ಒಳಗೆ(ಇರುವುದು) ತತ್ ಉ=ಅದು ಅಸ್ಯ ಸರ್ವಸ್ಯ=ಇದೆಲ್ಲದರ ಬಾಹ್ಯತಃ=ಹೊರಗೆ (ಇರುವುದು).

೫. ಅದು [1] ಚಲಿಸುತ್ತದೆ, ಚಲಿಸುವುದಿಲ್ಲ; [2] ಅದು ದೂರದಲ್ಲಿದೆ, [3] ಹತ್ತಿರದಲ್ಲಿದೆ; [4] ಅದು ಇದೆಲ್ಲವರ [5] ಒಳಗೂ [6] ಇದೆ, ಅದು ಇದೆಲ್ಲದರ ಹೊರಗೂ [7] ಇದೆ.

[1 ಆತ್ಮತತ್ತ್ವವು.
2 ಅದು ಸ್ವರೂಪದಿಂದ ಚಲಿಸದಿದ್ದರೂ ಉಪಾಧಿಯ ಮೂಲಕ ಚಲಿಸುವಂತೆ ಕಾಣುತ್ತದೆ.
3 ಅಜ್ಞಾನಿಗಳಿಗೆ ದೂರದಲ್ಲಿರುವಂತೆ ಕಾಣುತ್ತದೆ.
4 ಜ್ಞಾನಿಗಳ ಆತ್ಮವೇ ಆದುದರಿಂದ ಅತ್ಯಂತ ಸಮೀಪದಲ್ಲಿದೆ.
5 ನಾಮರೂಪಕ್ರಿಯಾತ್ಮಕವಾದ ಜಗತ್ತಿನ.
6 ನಿರತಿಶಯಸೂಕ್ಷ್ಮವಾಗಿರುವುದರಿಂದ.
7 ಆಕಾಶದಂತೆ ವ್ಯಾಪಕವಾಗಿರುವುದರಿಂದ.]

ಯಸ್ತು ಸರ್ವಾಣಿ ಭೂತಾ-
ನ್ಯಾತ್ಮನ್ಯೇವಾನುಪಶ್ಯತಿ ।
ಸರ್ವಭೂತೇಷು ಚಾತ್ಮಾನಂ
ತತೋ ನ ವಿಜುಗುಪ್ಸತೇ ॥ ೬ ॥

ತು=ಆದರೆ ಯಃ=ಯಾವನು ಸರ್ವಾಣಿ=ಸಮಸ್ತ ಭೂತಾನಿ=ಪ್ರಾಣಿಗಳನ್ನು ಆತ್ಮನಿ ಏವ=ಆತ್ಮದಲ್ಲಿಯೇ ಅನುಪಶ್ಯತಿ=ನೋಡುವನೋ ಚ=ಮತ್ತು ಸರ್ವ ಭೂತೇಷು=ಎಲ್ಲ ಪ್ರಾಣಿಗಳಲ್ಲಿ ಆತ್ಮಾನಂ=ತನ್ನ ಆತ್ಮವನ್ನು (ಅನುಪಶ್ಯತಿ=ನೋಡು ತ್ತಾನೆಯೋ ಸಃ=ಅವನು) ತತಃ=ಅದರಿಂದ ನ ವಿಜಗುಪ್ಸತೇ=ಜುಗುಪ್ಸೆಯನ್ನು ಮಾಡುವುದಿಲ್ಲ.

೬. ಯಾವನು ಸರ್ವಪ್ರಾಣಿಗಳನ್ನು ತನ್ನ ಆತ್ಮದಲ್ಲಿಯೇ ನೋಡು ವನೋ,[1] ಮತ್ತು (ತನ್ನ) ಆತ್ಮವನ್ನು ಸರ್ವಪ್ರಾಣಿಗಳಲ್ಲಿ (ನೋಡುವನೋ ಅವನು) ಅದರಿಂದ[2] ಜುಗುಪ್ಸೆಯನ್ನು[3] ಮಾಡುವುದಿಲ್ಲ.

[[1] ಎಂದರೆ ಆತ್ಮಕ್ಕಿಂತ ಬೇರೆಯಾಗಿ ಕಾಣುವುದಿಲ್ಲ.

[2] ಹಾಗೆ ನೋಡುವುದರಿಂದ.

[3] ಒಂದೇ ಆತ್ಮವಸ್ತುವು ತನಗೂ ಮತ್ತು ಇತರರಿಗೂ ಆತ್ಮವಾಗಿದೆ. ಆತ್ಮ ವ್ಯತಿರಿಕ್ತವಾದ ಯಾವ ವಸ್ತುವೂ ಇಲ್ಲದಿರುವಾಗ ಅಸಹ್ಯತೆಯನ್ನು ತೋರಿಸಲು ಸಾಧ್ಯವಾಗುವುದಿಲ್ಲ.]

ಯಸ್ಮಿನ್ ಸರ್ವಾಣಿ ಭೂತಾ-
ನ್ಯಾತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಃ ಶೋಕ
ಏಕತ್ವಮನುಪಶ್ಯತಃ ॥ ೭ ॥

ಯಸ್ಮಿನ್=ಎಲ್ಲಿ (ಯಾವ ಕಾಲದಲ್ಲಿ) ವಿಜಾನತಃ=ತಿಳಿದವನಿಗೆ ಸರ್ವಾಣಿ ಭೂತಾನಿ=ಎಲ್ಲ ಪ್ರಾಣಿಗಳು ಆತ್ಮಾ ಏವ ಅಭೂತ್=ಆತ್ಮವೇ ಆಗಿದೆಯೋ ತತ್ರ=ಅಲ್ಲಿ ಏಕತ್ವಂ=ಏಕತ್ವವನ್ನು ಅನುಪಶ್ಯತಃ=ನೋಡುತ್ತಿರುವವನಿಗೆ ಕಃ ಮೋಹಃ=ಮೋಹವೆಲ್ಲಿ ಕಃ ಶೋಕಃ=ಶೋಕವೆಲ್ಲಿ.

೭. ಯಾವಾಗ ತಿಳಿದವನಿಗೆ ಎಲ್ಲ ಪ್ರಾಣಿಗಳೂ (ತನ್ನ) ಆತ್ಮವೇ ಆಗಿದೆಯೋ ಅಲ್ಲಿ ಏಕತ್ವವನ್ನು ನೋಡುತ್ತಿರುವವನಿಗೆ[1] ಮೋಹವೆಲ್ಲಿ? ಶೋಕವೆಲ್ಲಿ?

[[1] ಶೋಕಮೋಹಗಳು ಅಜ್ಞಾನಿಗೆ ಆಗುವುದೇ ಹೊರತು ವಿಶುದ್ಧವಾದ ಆತ್ಮೈಕತ್ವವನ್ನು ನೋಡಿದವನಿಗೆ ಆಗಲಾರದು.]

ಸ ಪರ್ಯಗಾಚ್ಛುಕ್ರಮಕಾಯಮವ್ರಣ-
ಮಸ್ನಾವಿರಂ ಶುದ್ಧಮಪಾಪವಿದ್ಧಮ್ ।
ಕವಿರ್ಮನೀಷೀ ಪರಿಭೂಸ್ಸ್ವಯಂಭೂ-
ರ್ಯಾಥಾತಥ್ಯತೋಽರ್ಥಾನ್ ವ್ಯದಧಾಚ್ಛಾ-
ಶ್ವತೀಭ್ಯಃ ಸಮಾಭ್ಯಃ ॥ ೮ ॥

ಸಃ=ಅವನು ಪರ್ಯಗಾತ್=ಸರ್ವವ್ಯಾಪಿ ಶುಕ್ರಂ=ಜ್ಯೋತಿರ್ಮಯನು ಅಕಾಯಂ=ಶರೀರವಿಲ್ಲದವನು ಅವ್ರಣಂ=ವ್ರಣವಿಲ್ಲದವನು ಅಸ್ನಾವಿರಂ=ನರಗಳಿಲ್ಲದವನು ಶುದ್ಧಂ=ಶುದ್ಧನು ಅಪಾಪವಿದ್ಧಂ=ಪಾಪದ ಹೊಡೆತವಿಲ್ಲದವನು ಕವಿಃ=

ಕವಿಃ=ಕವಿಯೂ **ಮನೀಷೀ**=ಮನೀಷಿಯೂ **ಪರಿಭೂಃ**=ಸರ್ವೋತ್ತಮನೂ **ಸ್ವಯಂಭೂಃ**=ಸ್ವಯಂಭು (ಸಃ=ಅವನು) **ಶಾಶ್ವತೀಭ್ಯಃ**=ಶಾಶ್ವತರಾದ **ಸಮಾಭ್ಯಃ**=ಪ್ರಜಾಪತಿಗಳಿಗೆ **ಅರ್ಥಾನ್**=(ಕರ್ತವ್ಯ)ವಿಷಯಗಳನ್ನು **ಯಾಥಾತಥ್ಯತಃ**=ಯಥಾನುರೂಪವಾಗಿ **ವ್ಯದಧಾತ್**=ಹಂಚಿಕೊಟ್ಟನು.

೮. ಅವನು[1] ಸರ್ವವ್ಯಾಪಿ, ಜ್ಯೋತಿರ್ಮಯನು, ಶರೀರವಿಲ್ಲದವನು,[2] ವ್ರಣವಿಲ್ಲದವನು, ನರಗಳಿಲ್ಲದವನು,[3] ಶುದ್ಧನು,[4] ಪಾಪದ ಹೊಡೆತವಿಲ್ಲದವನು,[5] ಕವಿಯು[6] ಮನೀಷಿಯು,[7] ಸರ್ವೋತ್ತಮನು,[8] ಸ್ವಯಂಭು;[9] (ಅವನು) ಶಾಶ್ವತರಾದ (ಸಂವತ್ಸರರೆಂಬ ಹೆಸರಿನ) ಪ್ರಜಾಪತಿಗಳಿಗೆ (ಅವರವರ) ಕರ್ತವ್ಯಗಳನ್ನು ಯಥಾನುರೂಪವಾಗಿ[10] ಹಂಚಿಕೊಟ್ಟನು.

[1 ಆತ್ಮನು.
2 ಲಿಂಗಶರೀರವಿಲ್ಲದವನು.
3 'ಅವ್ರಣಂ ಅಸ್ನಾವಿರಂ' ಎಂದರೆ ಸ್ಥೂಲಶರೀರವಿಲ್ಲದವನು.
4 ಅವಿದ್ಯೆಯಿಲ್ಲದವನು; ಕಾರಣಶರೀರವಿಲ್ಲದವನು ಎಂದರ್ಥ.
5 ಧರ್ಮ ಅಧರ್ಮ ಮೊದಲಾದ ಪಾಪಗಳಿಲ್ಲದವನು.
6 ಕ್ರಾಂತಿದರ್ಶಿ—ಆಚೆ ಇರುವುದನ್ನು ನೋಡಬಲ್ಲವನು.
7 ಮನಸ್ಸನ್ನು ಆಳುವವನು, ಸರ್ವಜ್ಞ, ಈಶ್ವರ ಎಂದರ್ಥ.
8 ಎಲ್ಲಕ್ಕೂ ಮೇಲೆ ಇರುವವನು.
9 ತನ್ನಿಂದ ತಾನೇ ಆಗಿರುವವನು.
10 ಹೇಗಿರಬೇಕೋ ಹಾಗಿರುವುದು; ಕರ್ಮಫಲಗಳನ್ನು ಯಥಾರ್ಥವಾಗಿ ಸಾಧಿಸುವಂತೆ ಎಂದರ್ಥ.]

ಅಂಧಂ ತಮಃ ಪ್ರವಿಶಂತಿ
ಯೇಽವಿದ್ಯಾಮುಪಾಸತೇ ।
ತತೋ ಭೂಯ ಇವ ತೇ ತಮೋ
ಯ ಉ ವಿದ್ಯಾಯಾಂ ರತಾಃ ॥ ೯ ॥

ಯೇ=ಯಾರು **ಅವಿದ್ಯಾಂ**=ಅವಿದ್ಯೆಯನ್ನು **ಉಪಾಸತೇ**=ಉಪಾಸನೆಮಾಡುತ್ತಾರೋ (**ತೇ**=ಅವರು) **ಅಂಧಂ ತಮಃ**=ಕುರುಡುಗತ್ತಲೆಯನ್ನು **ಪ್ರವಿಶಂತಿ**=ಪ್ರವೇಶಿಸುತ್ತಾರೆ **ಯೇ ಉ**=ಆದರೆ ಯಾರು **ವಿದ್ಯಾಯಾಂ**=ವಿದ್ಯೆಯಲ್ಲಿ **ರತಾಃ**=ನಿರತರಾಗಿರುವರೋ **ತೇ**=ಅವರು **ತತಃ**=ಅದಕ್ಕಿಂತ **ಭೂಯಃ ಇವ**=ಹೆಚ್ಚಾದ **ತಮಃ**=ಕತ್ತಲೆಯನ್ನು (**ಪ್ರವಿಶಂತಿ**=ಪ್ರವೇಶಿಸುತ್ತಾರೆ).

೯. ಯಾರು ಅವಿದ್ಯೆಯನ್ನು[1] ಉಪಾಸನೆಮಾಡುತ್ತಾರೋ (ಅವರು) ಕುರುಡುಗತ್ತಲೆಯನ್ನು ಪ್ರವೇಶಿಸುತ್ತಾರೆ; ಆದರೆ ಯಾರು ವಿದ್ಯೆಯಲ್ಲಿ[2] ನಿರತರಾಗಿರುವರೋ ಅವರು ಅದಕ್ಕಿಂತ ಹೆಚ್ಚಿನ[3] ಕತ್ತಲೆಯನ್ನು (ಪ್ರವೇಶಿಸುತ್ತಾರೆ).

[ನಾಲ್ಕನೆಯ ಮಂತ್ರದಿಂದ ಎಂಟನೆಯ ಮಂತ್ರದ ವರೆಗೆ ಆತ್ಮದ ಸ್ವರೂಪವನ್ನು ಬೋಧಿಸಿದ್ದಾಯಿತು. ಇನ್ನು ಮುಂದೆ ಬರುವ ಮಂತ್ರಗಳು ಕರ್ಮೋಪಾಸಕರನ್ನು ಉದ್ದೇಶಿಸಿ ಹೇಳುತ್ತವೆ. ಜ್ಞಾನವಿಲ್ಲದೆ ಕರ್ಮೋಪಾಸನೆಗಳನ್ನು ಮಾಡುವವರಿಗಿಂತ ಕರ್ಮವನ್ನು ಬಿಟ್ಟು ದೇವತೆಗಳ ಉಪಾಸನೆಯನ್ನು ಮಾಡುವವರು ಕೆಳಗಿನ ಮಟ್ಟಕ್ಕೆ ಸೇರಿದವರೆಂದು ಈ ಮಂತ್ರವು ತಿಳಿಸುತ್ತದೆ.

1 ವಿದ್ಯೆಗೆ ವಿರೋಧವಾದ ಅಗ್ನಿಹೋತ್ರಾದಿ ಕರ್ಮಗಳು. ಇವುಗಳ ಅನುಷ್ಠಾನ ಆತ್ಮಜ್ಞಾನವಿಲ್ಲದಿರುವಾಗ ಮಾತ್ರ ಸಾಧ್ಯವು.

2 ಇದು ಬ್ರಹ್ಮವಿದ್ಯೆಯಲ್ಲ; ಕರ್ಮವಿಹೀನವಾದ ದೇವತಾವಿಷಯಕಜ್ಞಾನ.

3 "ಭೂಯ ಇವ" ಎಂಬುದಕ್ಕೆ "ಭೂಯ ಏವ" ಎಂದು ಆಚಾರ್ಯರು ವ್ಯಾಖ್ಯಾನಮಾಡಿದ್ದಾರೆ.]

ಅನ್ಯದೇವಾಹುರ್ವಿದ್ಯಯಾ-
ನ್ಯದಾಹುರವಿದ್ಯಯಾ ।
ಇತಿ ಶುಶ್ರುಮ ಧೀರಾಣಾಂ
ಯೇ ನಸ್ತದ್ವಿಚಚಕ್ಷಿರೇ ॥ ೧೦ ॥

ವಿದ್ಯಯಾ=ವಿದ್ಯೆಯಿಂದ ಅನ್ಯತ್ ಏವ=ಬೇರೆಯೆಂದೇ [ಪೂರ್ವಾಚಾರ್ಯಾಃ=ಪೂರ್ವಾಚಾರ್ಯರು] ಆಹುಃ=ಹೇಳುತ್ತಾರೆ ಅವಿದ್ಯಯಾ=ಅವಿದ್ಯೆಯಿಂದ ಅನ್ಯತ್=ಬೇರೆಯೆಂದು ಆಹುಃ=ಹೇಳುತ್ತಾರೆ ಯೇ=ಯಾರು ನಃ=ನಮಗೆ ತತ್=ಅದನ್ನು ವಿಚಚಕ್ಷಿರೇ=ವಿವರಿಸಿದರೋ [ತೇಷಾಂ=ಅಂತಹ] ಧೀರಾಣಾಂ=ಧೀರರಿಂದ ಇತಿ=ಹೀಗೆ ಶುಶ್ರುಮ=ಕೇಳಿದ್ದೇವೆ.

೧೦. ವಿದ್ಯೆಯ (ಫಲವು)[1] ಬೇರೆಯೆಂದೂ, ಅವಿದ್ಯೆಯ (ಫಲವು)[2] ಬೇರೆಯೆಂದೂ (ಪೂರ್ವಾಚಾರ್ಯರು) ಹೇಳುತ್ತಾರೆ; ಯಾರು ನಮಗೆ ಅದನ್ನು[3] ವಿವರಿಸಿದರೋ (ಅಂತಹ) ಧೀರರಿಂದ ಹೀಗೆ ಕೇಳಿರುತ್ತೇವೆ.

[1 ದೇವತಾಜ್ಞಾನದಿಂದ ದೇವಲೋಕಕ್ಕೆ ಹೋಗುವುದು; "ವಿದ್ಯಯಾ ದೇವಲೋಕಃ" (ಬೃ. ಉ. ೧-೫-೧೬) ಎಂಬ ಶ್ರುತಿ ಇದಕ್ಕೆ ಆಧಾರ.

2 ಕರ್ಮದಿಂದ ಪಿತೃಲೋಕಕ್ಕೆ ಹೋಗುವುದು; "ಕರ್ಮಣಾ ಪಿತೃಲೋಕಃ" (ಬೃ. ಉ. ೧-೫-೧೬) ಎಂಬ ಶ್ರುತಿ ಇದಕ್ಕೆ ಆಧಾರ.

3 ಕರ್ಮವನ್ನು ಮತ್ತು ಜ್ಞಾನವನ್ನು.]

ವಿದ್ಯಾಂ ಚಾವಿದ್ಯಾಂ ಚ
ಯಸ್ತದ್ವೇದೋಭಯಂ ಸಹ।
ಅವಿದ್ಯಯಾ ಮೃತ್ಯುಂ ತೀರ್ತ್ವಾ
ವಿದ್ಯಯಾಮೃತಮಶ್ನುತೇ ॥ ೧೧ ॥

ಯಃ=ಯಾವನು ವಿದ್ಯಾಂ ಚ=ವಿದ್ಯೆಯನ್ನೂ ಅವಿದ್ಯಾಂ ಚ=ಮತ್ತು ಅವಿದ್ಯೆಯನ್ನೂ ತತ್ ಉಭಯಂ=ಆ ಎರಡನ್ನೂ ಸಹ=ಒಟ್ಟಿಗೆ ವೇದ=ಅರಿಯುತ್ತಾನೆಯೋ (ಸಃ=ಅವನು) ಅವಿದ್ಯಯಾ=ಅವಿದ್ಯೆಯ ದ್ವಾರಾ ಮೃತ್ಯುಂ=ಮೃತ್ಯುವನ್ನು ತೀರ್ತ್ವಾ=ದಾಟಿ ವಿದ್ಯಯಾ=ವಿದ್ಯೆಯ ದ್ವಾರಾ ಅಮೃತಂ=ಅಮೃತವನ್ನು ಅಶ್ನುತೇ=ಪಡೆಯುತ್ತಾನೆ.

೧೧. ಯಾವನು ವಿದ್ಯೆ ಮತ್ತು ಅವಿದ್ಯೆ—ಇವೆರಡನ್ನೂ, ಒಟ್ಟುಗೂಡಿಸಿ ಅರಿಯುತ್ತಾನೋ (ಅವನು) ಅವಿದ್ಯೆಯ ದ್ವಾರಾ[1] ಮೃತ್ಯುವನ್ನು[2] ದಾಟಿ, ವಿದ್ಯೆಯ ದ್ವಾರಾ[3] ಅಮೃತವನ್ನು[4] ಪಡೆಯುತ್ತಾನೆ.

[ಆಪೇಕ್ಷಿಕವಾದ ಅಮೃತತ್ವವನ್ನು ಪಡೆಯಲು ಕರ್ಮಜ್ಞಾನಗಳ ಸಮುಚ್ಚಯವು ಸುಲಭಸಾಧನವೆಂದು ಈ ಮಂತ್ರದಲ್ಲಿ ಸೂಚಿಸಿದೆ.

1 ಅಗ್ನಿಹೋತ್ರಾದಿಕರ್ಮಗಳ ದ್ವಾರಾ.
2 ಮನುಷ್ಯನ ಸ್ವಾಭಾವಿಕ ಕರ್ಮಜ್ಞಾನಗಳನ್ನೇ ಮೃತ್ಯುವೆಂದು ಹೇಳಿದೆ.
3 ದೇವತಾಜ್ಞಾನದ ದ್ವಾರಾ.
4 ಆತ್ಯಂತಿಕವಾದ ಮೋಕ್ಷವಲ್ಲ, ಆಪೇಕ್ಷಿಕವಾದ ದೇವತಾತ್ಮಭಾವ.]

ಅಂಧಂ ತಮಃ ಪ್ರವಿಶಂತಿ
ಯೇಽಸಂಭೂತಿಮುಪಾಸತೇ।
ತತೋ ಭೂಯ ಇವ ತೇ ತಮೋ
ಯ ಉ ಸಂಭೂತ್ಯಾಂ ರತಾಃ ॥ ೧೨ ॥

ಯೇ=ಯಾರು ಅಸಂಭೂತಿಂ=ಅಸಂಭೂತಿಯನ್ನು ಉಪಾಸತೇ=ಉಪಾಸನೆ ಮಾಡುತ್ತಾರೋ (ತೇ=ಅವರು) ಅಂಧಂ ತಮಃ=ಕುರುಡುಗತ್ತಲೆಯನ್ನು ಪ್ರವಿಶಂತಿ=ಪ್ರವೇಶಿಸುತ್ತಾರೆ ಯೇ ಉ=ಆದರೆ ಯಾರು ಸಂಭೂತ್ಯಾಂ=ಸಂಭೂತಿಯಲ್ಲಿ ರತಾಃ=ನಿರತರಾಗಿರುವರೋ ತೇ=ಅವರು ತತಃ=ಅದಕ್ಕಿಂತ ಭೂಯಃ ಇವ=ಹೆಚ್ಚಾದ ತಮಃ=ಕತ್ತಲೆಯನ್ನು (ಪ್ರವಿಶಂತಿ=ಪ್ರವೇಶಿಸುತ್ತಾರೆ).

೧೨. ಯಾರು ಅಸಂಭೂತಿಯನ್ನು[1] ಉಪಾಸನೆಮಾಡುತ್ತಾರೋ (ಅವರು) ಕುರುಡುಗತ್ತಲೆಯನ್ನು ಪ್ರವೇಶಿಸುತ್ತಾರೆ; ಆದರೆ ಯಾರು ಸಂಭೂತಿಯಲ್ಲಿ[2] ನಿರತರಾಗಿರುವರೋ ಅವರು ಅದಕ್ಕಿಂತ ಹೆಚ್ಚಿನ ಕತ್ತಲೆಯನ್ನು ಪ್ರವೇಶಿಸುತ್ತಾರೆ.

[ಈಗ ಅವ್ಯಾಕೃತವಾದ ಪ್ರಕೃತಿ, ವ್ಯಾಕೃತವಾದ ಕಾರ್ಯಬ್ರಹ್ಮ–ಈ ಎರಡು ಉಪಾಸನೆಗಳನ್ನೂ ಸೇರಿಸಬೇಕೆಂಬ ಇಚ್ಛೆಯಿಂದ ಶ್ರುತಿಯು ಇವುಗಳನ್ನು ಪ್ರತ್ಯೇಕವಾಗಿ ನಿಂದಿಸಿದೆ.

1 ಅವ್ಯಾಕೃತವೆಂಬ ಹೆಸರಿನ ಪ್ರಕೃತಿ. ಅವ್ಯಾಕೃತವೆಂದರೆ ನಾಮರೂಪಗಳು ವಿಂಗಡವಾಗುವುದಕ್ಕೆ ಮೊದಲೇ ಇದ್ದ ಸೂಕ್ಷ್ಮಾವಸ್ಥೆ. ಇದು ಕಾಮಕರ್ಮಗಳಿಗೆ ಕಾರಣವಾಗಿರುತ್ತದೆ. ಅವ್ಯಾಕೃತದ ಉಪಾಸನೆಯೆಂದರೆ ಜಗತ್ತಿನ ಕಾರಣರೂಪದಲ್ಲಿರುವ ಬ್ರಹ್ಮದ ಉಪಾಸನೆ.

2 ಸೃಷ್ಟಿಯಲ್ಲಿ ಮೊದಲನೆಯವನಾದ ಹಿರಣ್ಯಗರ್ಭನೆಂಬ ಕಾರ್ಯಬ್ರಹ್ಮ. ವ್ಯಾಕೃತೋಪಾಸನೆಯೆಂದರೆ ಜಗದ್ರೂಪದಲ್ಲಿರುವ ಕಾರ್ಯಬ್ರಹ್ಮನ ಉಪಾಸನೆ.]

ಅನ್ಯದೇವಾಹುಃ ಸಂಭವಾ-
ದನ್ಯದಾಹುರಸಂಭವಾತ್ ।
ಇತಿ ಶುಶ್ರುಮ ಧೀರಾಣಾಂ
ಯೇ ನಸ್ತದ್ವಿಚಚಕ್ಷಿರೇ ॥ ೧೩ ॥

ಸಂಭವಾತ್=ಸಂಭೂತಿಯಿಂದ **ಅನ್ಯತ್ ಏವ**=ಬೇರೆಯೆಂದೇ **ಆಹುಃ**=ಹೇಳುತ್ತಾರೆ **ಅಸಂಭವಾತ್**=ಅಸಂಭೂತಿಯಿಂದ **ಅನ್ಯತ್**=ಬೇರೆಯೆಂದು **ಆಹುಃ**=ಹೇಳುತ್ತಾರೆ **ಯೇ**=ಯಾರು **ನಃ**=ನಮಗೆ **ತತ್**=ಅದನ್ನು **ವಿಚಚಕ್ಷಿರೇ**=ವಿವರಿಸಿದರೋ (**ತೇಷಾಂ**=ಅಂತಹ) **ಧೀರಾಣಾಂ**=ಧೀರರಿಂದ **ಇತಿ**=ಹೀಗೆ **ಶುಶ್ರುಮ**=ಕೇಳಿದ್ದೇವೆ.

೧೩. ಸಂಭೂತಿಯ[1] (ಫಲವು)[2] ಬೇರೆಯೆಂದೂ, ಅಸಂಭೂತಿಯ[3] (ಫಲವು)[4] ಬೇರೆಯೆಂದೂ (ಪೂರ್ವಾಚಾರ್ಯರು) ಹೇಳುತ್ತಾರೆ; ಯಾರು ನಮಗೆ ಅದನ್ನು[5] ವಿವರಿಸಿದರೋ (ಅಂತಹ) ಧೀರರಿಂದ ಹೀಗೆ ಕೇಳಿರುತ್ತೇವೆ.

[1 ಕಾರ್ಯಬ್ರಹ್ಮದ ಉಪಾಸನೆಯಿಂದ.
2 ಅಣಿಮಾದ್ಯೈಶ್ವರ್ಯರೂಪವಾದ ಫಲ.
3 ಅವ್ಯಾಕೃತೋಪಾಸನೆಯಿಂದ.
4 ಪ್ರಕೃತಿಯಲ್ಲಿ ಲಯವಾಗುವುದು.
5 ವ್ಯಾಕೃತ ಅವ್ಯಾಕೃತ ಉಪಾಸನೆಗಳ ಫಲ.]

ಸಂಭೂತಿಂ ಚ ವಿನಾಶಂ ಚ
ಯಸ್ತದ್ವೇದೋಭಯಂ ಸಹ ।
ವಿನಾಶೇನ ಮೃತ್ಯುಂ ತೀರ್ತ್ವಾ
ಸಂಭೂತ್ಯಾಮೃತಮಶ್ನುತೇ ॥ ೧೪ ॥

ಯಃ=ಯಾವನು (ಅ)ಸಂಭೂತಿಂ ಚ=ಅಸಂಭೂತಿಯನ್ನೂ ವಿನಾಶಂ ಚ= ಮತ್ತು ವಿನಾಶವನ್ನೂ ತತ್ ಉಭಯಂ=ಆ ಎರಡನ್ನೂ ಸಹ=ಒಟ್ಟಿಗೆ ವೇದ= ಅರಿಯುತ್ತಾನೆಯೋ (ಸಃ=ಅವನು) ವಿನಾಶೇನ=ವಿನಾಶದ ದ್ವಾರಾ ಮೃತ್ಯುಂ= ಮೃತ್ಯುವನ್ನು ತೀರ್ತ್ವಾ = ದಾಟಿ (ಅ)ಸಂಭೂತ್ಯಾ= ಅಸಂಭೂತಿಯ ದ್ವಾರಾ ಅಮೃತಂ=ಅಮೃತವನ್ನು ಅಶ್ನುತೇ=ಪಡೆಯುತ್ತಾನೆ.

೧೪. ಯಾವನು (ಅ)ಸಂಭೂತಿ ಮತ್ತು ವಿನಾಶ—ಇವೆರಡನ್ನೂ ಒಟ್ಟುಗೂಡಿಸಿ ಅರಿಯುತ್ತಾನೋ (ಅವನು) ವಿನಾಶದ ದ್ವಾರಾ[1] ಮೃತ್ಯುವನ್ನು[2] ದಾಟಿ, (ಅ)ಸಂಭೂತಿಯ[3] ದ್ವಾರಾ ಅಮೃತವನ್ನು[4] ಪಡೆಯುತ್ತಾನೆ.

[ಶ್ರೀಶಂಕರಾಚಾರ್ಯರು ಮೊದಲನೆಯ ಪದವಾದ "ಸಂಭೂತಿ" ಎಂಬುದನ್ನು "ಅಸಂಭೂತಿ" ಎಂದು ಗ್ರಹಿಸಬೇಕೆಂದು ಹೇಳಿರುತ್ತಾರೆ.

1 ಹಿರಣ್ಯಗರ್ಭನ ಅಥವಾ ಕಾರ್ಯಬ್ರಹ್ಮನ ಉಪಾಸನೆಯಿಂದ.

2 ಅನೈಶ್ವರ್ಯ ಅಧರ್ಮ ಕಾಮ ಮೊದಲಾದ ದೋಷಗಳ ಗುಂಪನ್ನು.

3 ಅವ್ಯಾಕೃತೋಪಾಸನೆಯಿಂದ.

4 ಪ್ರಕೃತಿಲಯವನ್ನು.

ಶುಕ್ಲಯಜುರ್ವೇದಮಾಧ್ಯಂದಿನಶಾಖೆಯ ಭಾಷ್ಯಕಾರರಾದ ಉವಟಾಚಾರ್ಯರು "ಸಂಭೂತಿ" ಎಂಬುದನ್ನು "ಪರಬ್ರಹ್ಮ" ಎಂದು ಗ್ರಹಿಸಬೇಕೆಂದೂ, "ವಿನಾಶ" ಎಂಬುದನ್ನು ನಾಶಸ್ವಭಾವವುಳ್ಳ "ಶರೀರ" ಎಂದು ಗ್ರಹಿಸಬೇಕೆಂದೂ ಹೇಳಿರುತ್ತಾರೆ. ಅವರ ವ್ಯಾಖ್ಯಾನ ಹೀಗಿದೆ:

"ಯಾವ ಯೋಗಿಯು ಪರಬ್ರಹ್ಮ ಮತ್ತು ಶರೀರ—ಇವೆರಡನ್ನೂ ತಿಳಿದಿರುತ್ತಾನೆಯೋ ಅವನು ಜ್ಞಾನೋತ್ಪತ್ತಿಗೆ ಕಾರಣವಾದ ಶಾರೀರಿಕ ಕರ್ಮಗಳ ಮೂಲಕ ಮೃತ್ಯುವನ್ನು ದಾಟಿ ಬ್ರಹ್ಮಜ್ಞಾನದಿಂದ ಅಮೃತತ್ವವನ್ನು ಹೊಂದುತ್ತಾನೆ."]

ಹಿರಣ್ಮಯೇನ ಪಾತ್ರೇಣ
ಸತ್ಯಸ್ಯಾಪಿಹಿತಂ ಮುಖಮ್ ।
ತತ್ತ್ವಂ ಪೂಷನ್ನಪಾವೃಣು
ಸತ್ಯಧರ್ಮಾಯ ದೃಷ್ಟಯೇ ॥ ೧೫ ॥

ಪೂಷನ್=ಹೇ ಪೂಷನ್ **ಹಿರಣ್ಮಯೇನ**=ಜ್ಯೋತಿರ್ಮಯವಾದ **ಪಾತ್ರೇಣ**=ಮುಚ್ಚಳದಿಂದ **ಸತ್ಯಸ್ಯ**=ಸತ್ಯದ **ಮುಖಂ**=ಮುಖವು **ಅಪಿಹಿತಂ**=ಮುಚ್ಚಲ್ಪಟ್ಟಿದೆ **ತ್ವಂ**=ನೀನು **ಸತ್ಯಧರ್ಮಾಯ**=ಸತ್ಯಧರ್ಮನಾದ ನನಗೆ **ದೃಷ್ಟಯೇ**=ಕಾಣುವುದಕ್ಕಾಗಿ **ತತ್**=ಅದನ್ನು **ಅಪಾವೃಣು**=ತೆಗೆದುಹಾಕು.

೧೫. ಹೇ ಪೂಷನ್,[1] ಜ್ಯೋತಿರ್ಮಯವಾದ ಮುಚ್ಚಳದಿಂದ[2] ಸತ್ಯದ ಮುಖವು[3] ಮುಚ್ಚಲ್ಪಟ್ಟಿದೆ; ಸತ್ಯಧರ್ಮನಾದ[4] ನನಗೆ (ಸತ್ಯವು) ಕಾಣುವಂತೆ ಅದನ್ನು ನೀನು ತೆಗೆದುಹಾಕು.

[ಏಷಣಗಳನ್ನು ಬಿಡದೆ ಜನ್ಮದಿಂದ ಮರಣದ ವರೆಗೆ ಕರ್ಮಮಾರ್ಗದಲ್ಲಿ ಪ್ರವೃತ್ತನಾಗಿ ಅಪರಬ್ರಹ್ಮವನ್ನು ಉಪಾಸನೆಮಾಡುತ್ತಿರುವ ಸಾಧಕನು ಯಾವ ಮಾರ್ಗದ ಮೂಲಕ ಅಮೃತತ್ವವನ್ನು ಹೊಂದುವನೆಂದು ಶ್ರುತಿಯು ಇಲ್ಲಿಂದ ಹೇಳುತ್ತೆ. ಆದಿತ್ಯಮಂಡಲದ ಪ್ರಕಾಶಮಾನವಾದ ಕಿರಣಗಳು ಅದರಲ್ಲಿರುವ ಸತ್ಯಬ್ರಹ್ಮವನ್ನು ಕಾಣದಂತೆ ಮುಚ್ಚಿಕೊಂಡಿರುತ್ತವೆ. ಮರಣಕಾಲವು ಒದಗಿದಾಗ ಉಪಾಸಕನು ಆತ್ಮಪ್ರಾಪ್ತಿಗೋಸ್ಕರ ಸತ್ಯಾತ್ಮನನ್ನು ಈ ರೀತಿ ಪ್ರಾರ್ಥಿಸುತ್ತಾನೆ. ಆದಿತ್ಯ, ಹೃದಯ, ಕಣ್ಣುಗಳು — ಇವು ಬ್ರಹ್ಮೋಪಾಸನೆಗೆ ವಿಶೇಷ ಸ್ಥಾನಗಳೆಂದು ಶ್ರುತಿಗಳು ಹೇಳುತ್ತವೆ: ಛಾಂದೋಗ್ಯ ಉ. ೩–೧೯–೪, ೮–೩–೩, ೪–೧೫–೧; ಬೃಹದಾರಣ್ಯಕ ಉ. ೨–೧–೨, ೪–೩–೬, ೨–೩–೫; ಕೌಷೀತಕೀ ಉ. ೪–೩; ಕಠ ಉ. ೬–೯.

1 ಪೋಷಕನಾದ ಸೂರ್ಯನೆ.

2 ಆದಿತ್ಯಮಂಡಲವೇ ಮುಚ್ಚಳ.

3 ದ್ವಾರವು.

4 ಸತ್ಯಬ್ರಹ್ಮವನ್ನು ಉಪಾಸನೆಮಾಡುವ ಧರ್ಮವುಳ್ಳವನು ಸತ್ಯಧರ್ಮನು ಅಥವಾ ಸತ್ಯವಾದ ಧರ್ಮವನ್ನು ಅನುಷ್ಠಾನಮಾಡುವವನು ಸತ್ಯಧರ್ಮನು.]

ಪೂಷನ್ನೇಕರ್ಷೇ ಯಮ ಸೂರ್ಯ ಪ್ರಾಜಾಪತ್ಯ
ವ್ಯೂಹ ರಶ್ಮೀನ್ ಸಮೂಹ ತೇಜೋ ।
ಯತ್ತೇ ರೂಪಂ ಕಲ್ಯಾಣತಮಂ ತತ್ತೇ
ಪಶ್ಯಾಮಿ ಯೋಽಸಾವಸೌ ಪುರುಷಃ ಸೋಽಹಮಸ್ಮಿ ॥ ೧೬ ॥

ಪೂಷನ್=ಹೇ ಪೂಷನ್ **ಏಕರ್ಷೇ**=ಏಕಾಕಿಯಾಗಿ ಸಂಚರಿಸುವವನೆ **ಯಮ**=ಯಮನೆ **ಪ್ರಾಜಾಪತ್ಯ**=ಪ್ರಾಜಾಪತ್ಯನೆ **ಸೂರ್ಯ**=ಸೂರ್ಯನೆ **ರಶ್ಮೀನ್**=ರಶ್ಮಿಗಳನ್ನು **ವ್ಯೂಹ**=ತೆಗೆ **ತೇಜಃ**=ತೇಜಸ್ಸನ್ನು **ಸಮೂಹ**=ಹಿಂದೆಗೆದುಕೊ **ತೇ**=ನಿನ್ನ **ಕಲ್ಯಾಣತಮಂ**=ಕಲ್ಯಾಣತಮವಾದ **ರೂಪಂ**=ರೂಪವು **ಯತ್**=ಯಾವುದೋ **ತತ್**=ಅದನ್ನು **ತೇ**=ನಿನ್ನ (**ಪ್ರಸಾದಾತ್**=ಅನುಗ್ರಹದಿಂದ) **ಪಶ್ಯಾಮಿ**=ನೋಡುತ್ತೇನೆ

ಅಸೌ=ಆ ಅಸೌ=ಆ ಪುರುಷಃ=ಪುರುಷನು ಯಃ=ಯಾವನೋ ಸಃ=ಅವನೇ ಅಹಂ ಅಸ್ಮಿ=ನಾನಾಗಿರುವೆನು.

೧೬. ಹೇ ಪೂಷನ್, ಏಕಾಕಿಯಾಗಿ ಸಂಚರಿಸುವವನೆ, ಯಮನೆ,[1] ಸೂರ್ಯನೆ,[2] ಪ್ರಾಜಾಪತ್ಯನೆ,[3] (ನಿನ್ನ) ರಶ್ಮಿಗಳನ್ನು ತೆಗೆ, (ನಿನ್ನ) ತೇಜಸ್ಸನ್ನು ಹಿಂತೆಗೆದುಕೊ; ನಿನ್ನ ಕಲ್ಯಾಣತಮವಾದ[4] ರೂಪವು ಯಾವುದೋ ಅದನ್ನು (ನಿನ್ನ) ಅನುಗ್ರಹದಿಂದ ನೋಡುತ್ತೇನೆ. ಆ[5] ಆ[6] ಪುರುಷನು[7] ಯಾವನೋ ಅವನೇ ನಾನಾಗಿದ್ದೇನೆ.

[1 ಎಲ್ಲವನ್ನೂ ಹತೋಟಿಯಲ್ಲಿಟ್ಟಿರುವುದರಿಂದ (ಸಂಯಮನಾತ್) ಯಮನು.
2 ರಶ್ಮಿಗಳನ್ನೂ ಪ್ರಾಣಗಳನ್ನೂ ರಸಗಳನ್ನೂ ಸ್ವೀಕರಿಸುವುದರಿಂದ ಸೂರ್ಯನು.
3 ಪ್ರಜಾಪತಿಯ ಮಗನಾದುದರಿಂದ ಪ್ರಾಜಾಪತ್ಯನು.
4 ಅತ್ಯಂತ ಶೋಭನವಾದ.
5 ಆದಿತ್ಯಮಂಡಲದಲ್ಲಿರುವ.
6 ವ್ಯಾಹೃತಿಗಳೆಂಬ (ಭೂಃ, ಭುವಃ, ಸ್ವಃ) ಅವಯವಗಳುಳ್ಳ.
7 ಪುರುಷಾಕಾರದಲ್ಲಿರುವುದರಿಂದ ಅಥವಾ ಈತನು ಪ್ರಾಣಬುದ್ಧಿಗಳ ರೂಪದಿಂದ ಜಗತ್ತನ್ನೆಲ್ಲಾ ಪೂರ್ಣಗೊಳಿಸಿರುವುದರಿಂದ ಅಥವಾ ಪುರದಲ್ಲಿ (ಹೃದಯದಲ್ಲಿ) ಇರುವುದರಿಂದ ಪುರುಷನು.]

ವಾಯುರನಿಲಮಮೃತ-
ಮಥೇದಂ ಭಸ್ಮಾಂತಂ ಶರೀರಮ್ ।
ಓಂ ಕ್ರತೋ ಸ್ಮರ ಕೃತಂ ಸ್ಮರ
ಕ್ರತೋ ಸ್ಮರ ಕೃತಂ ಸ್ಮರ ॥ ೧೭ ॥

ಅಥ=ಈಗ ವಾಯುಃ=ಪ್ರಾಣವಾಯುವು ಅಮೃತಂ=ಸಾವಿಲ್ಲದ ಅನಿಲಂ=ಅನಿಲವನ್ನು (ಪ್ರತಿಪದ್ಯತಾಂ=ಸೇರಲಿ) ಇದಂ=ಈ ಶರೀರಂ=ಶರೀರವು ಭಸ್ಮಾಂತಂ=(ಭೂಯಾತ್)=ಭಸ್ಮವಾಗಲಿ ಓಂ=ಓಂ ಕ್ರತೋ=ಕ್ರತುವೆ ಸ್ಮರ=ಸ್ಮರಿಸು ಕೃತಂ=ಮಾಡಿದ್ದನ್ನು ಸ್ಮರ=ಸ್ಮರಿಸು ಕ್ರತೋ ಸ್ಮರ ಕೃತಂ ಸ್ಮರ (ಪುನರ್ವಚನ ಆದರಕ್ಕೋಸ್ಕರ).

೧೭. ಈಗ (ನನ್ನ) ಪ್ರಾಣವಾಯುವು ಸಾವಿಲ್ಲದ ಅನಿಲವನ್ನು[1] (ಸೇರಲಿ); ಈ ದೇಹವು ಬೂದಿಯಾಗಲಿ. ಓಂ ಕ್ರತುವೆ,[2] ಸ್ಮರಿಸು, ಮಾಡಿರುವುದನ್ನು[3] ಸ್ಮರಿಸು. ಓಂ ಕ್ರತುವೆ, ಸ್ಮರಿಸು, ಮಾಡಿರುವುದನ್ನು ಸ್ಮರಿಸು.[4]

[[1] ಸರ್ವಾತ್ಮನಾದ ಸೂತ್ರಾತ್ಮ; ಇವನನ್ನೇ ಮಾತರಿಶ್ವನೆಂದು ನಾಲ್ಕನೆಯ ಮಂತ್ರದಲ್ಲಿ ಹೇಳಿದೆ.

[2] ಸಂಕಲ್ಪರೂಪನಾದ ಅಗ್ನಿ.

[3] ಬಾಲ್ಯದಿಂದ ಅನುಷ್ಠಾನಮಾಡಿದ ಕರ್ಮ.

[4] ಅಂತಿಮಕಾಲದಲ್ಲಿ ಉಂಟಾಗುವ ಸ್ಮೃತಿಯು ಜೀವಾತ್ಮನ ಭವಿಷ್ಯವನ್ನು ನಿರ್ಧರಿಸುವುದರಿಂದ ಅವಸಾನಕಾಲ ಒದಗಿದಾಗ ಮನಸ್ಸು ಸದ್ಭಾವನೆಗಳ ಕಡೆಗೇ ಹೋಗುವಂತೆ ಪ್ರಯತ್ನಿಸಬೇಕು. "ಮರಣಕಾಲದಲ್ಲಿ ಯಾವಯಾವ ಭಾವವನ್ನಾದರೂ ಸ್ಮರಿಸುತ್ತಾ ದೇಹವನ್ನು ಬಿಡುವನೋ, ಅವನು ಆ ಭಾವವನ್ನೇ ಹೊಂದುವನು" ಎಂದು ಭಗವಂತನು ಗೀತೆಯಲ್ಲಿ (೮-೬) ಹೇಳಿದ್ದಾನೆ.]

ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್
ವಿಶ್ವಾನಿ ದೇವ ವಯುನಾನಿ ವಿದ್ವಾನ್ ।
ಯುಯೋಧ್ಯಸ್ಮಜ್ಜುಹುರಾಣಮೇನೋ
ಭೂಯಿಷ್ಠಾಂ ತೇ ನಮಉಕ್ತಿಂ ವಿಧೇಮ ॥ ೧೮ ॥

ಅಗ್ನೇ=ಹೇ ಅಗ್ನಿ ಅಸ್ಮಾನ್=ನಮ್ಮನ್ನು ರಾಯೇ=ಕರ್ಮಫಲಭೋಗಕ್ಕಾಗಿ ಸುಪಥಾ=ಒಳ್ಳೆಯ ಮಾರ್ಗದಿಂದ ನಯ=ಕರೆದುಕೊಂಡು ಹೋಗು ದೇವ=ಹೇ ದೇವನೆ ವಿಶ್ವಾನಿ=ಎಲ್ಲ ವಯುನಾನಿ=ಕರ್ಮಗಳನ್ನು ವಿದ್ವಾನ್=ತಿಳಿದಿರುವವನು ಅಸ್ಮತ್=ನಮ್ಮಿಂದ ಜುಹುರಾಣಂ=ಕುಟಿಲವಾದ ಏನಃ=ಪಾಪವನ್ನು ಯುಯೋಧಿ=ಬಿಡಿಸು ತೇ=ನಿನಗೆ ಭೂಯಿಷ್ಠಾಂ=ಅನೇಕ ನಮಉಕ್ತಿಂ=ನಮಸ್ಕಾರವಚನವನ್ನು ವಿಧೇಮ=ಹೇಳುತ್ತೇವೆ.

೧೮. ಹೇ ಅಗ್ನಿ, ಕರ್ಮಫಲದ ಭೋಗಕ್ಕಾಗಿ ನಮ್ಮನ್ನು ಒಳ್ಳೆಯ ಮಾರ್ಗದಲ್ಲಿ[1] ಕರೆದುಕೊಂಡು ಹೋಗು; ಹೇ ದೇವ (ನೀನು) ಎಲ್ಲ ಕರ್ಮಗಳನ್ನು (ಅಥವಾ ಜ್ಞಾನಗಳನ್ನು) ತಿಳಿದಿರುವವನು. ನಮ್ಮ ಕುಟಿಲವಾದ ಪಾಪವನ್ನು ನಾಶಮಾಡು. ನಿನಗೆ ಪುನಃ ಪುನಃ ನಮಸ್ಕಾರವಚನವನ್ನು[2] ಹೇಳುತ್ತೇವೆ.

[[1] ದಕ್ಷಿಣಮಾರ್ಗದಲ್ಲಿ (ಪಿತೃಯಾನದಲ್ಲಿ) ಹೋದವರು ಸಂಸಾರಕ್ಕೆ ಪುನಃ ಪುನಃ ಹಿಂದಿರುಗಬೇಕಾಗುತ್ತೆ. ದೇವಯಾನದಲ್ಲಿ ಅಥವಾ ಉತ್ತರಮಾರ್ಗದಲ್ಲಿ ಹೋದವರು ಕಲ್ಪದ ಕೊನೆಯ ವರೆಗೆ ಬ್ರಹ್ಮಲೋಕದಲ್ಲೇ ಇದ್ದು ಅನಂತರ ಕ್ರಮೇಣ ಮುಕ್ತಿಯನ್ನು ಹೊಂದುತ್ತಾರೆ. ದಕ್ಷಿಣಮಾರ್ಗದಲ್ಲಿ ಎಷ್ಟೋ ಸಲ ಹೋಗಿಬಂದು ನೊಂದ ಉಪಾಸಕನು ದೇವಯಾನದಲ್ಲಿ ಹೋಗುವುದಕ್ಕೆ ಅಗ್ನಿಯನ್ನು ಪ್ರಾರ್ಥಿಸುತ್ತಾನೆ.

[2] ಸಾಯುತ್ತಿರುವ ಉಪಾಸಕನಿಗೆ ವಿಶೇಷವಾಗಿ ಸೇವೆಮಾಡಲು ಶಕ್ತಿಯಿಲ್ಲ; ಆದುದರಿಂದ ನಮಸ್ಕಾರದಿಂದಲೇ ಸೇವೆಯನ್ನು ಸಲ್ಲಿಸುತ್ತಾನೆ.]

ಶ್ರೀವೇದಾಂತದೇಶಿಕರ ವ್ಯಾಖ್ಯಾನವನ್ನು ಅನುಸರಿಸಿದ

ತಾತ್ಪರ್ಯಟಿಪ್ಪಣಿಗಳು

ವ್ಯಕ್ತಾವ್ಯಕ್ತೇ ವಾಜಿನಾಂ ಸಂಹಿತಾಂತೇ
ವ್ಯಾಖ್ಯಾಮಿತ್ಥಂ ವಾಜಿವಕ್ತ್ರಪ್ರಸಾದಾತ್ ।
ವೈಶ್ವಾಮಿತ್ರೋ ವಿಶ್ವಮಿತ್ರಂ ವ್ಯತಾನೀದ್
ವಿದ್ವಚ್ಛಾತ್ರಪ್ರೀತಯೇ ವೆಂಕಟೇಶಃ ॥

ಈಶಾವಾಸ್ಯೋಪನಿಷತ್

೧. ಈ ಜಗತ್ತಿನಲ್ಲಿ[1] ಪರಿಣಾಮಸ್ವಭಾವವುಳ್ಳದ್ದು[2] ಏನೇನಿದೆಯೋ[3] ಇದೆಲ್ಲವೂ[4] ಈಶನಿಂದ[5] ವ್ಯಾಪಿಸಲ್ಪಡತಕ್ಕದ್ದು. ಅದರ[6] ತ್ಯಾಗದಿಂದ[7] ಅನುಭವಿಸು.[8] ಯಾರ ಧನವನ್ನೂ ಬಯಸಬೇಡ.[9]

[ಅಚಿದ್ವಿಕಾರವಾದ ದೇಹದಲ್ಲಿ ನೆಲಸಿರುವ ಜೀವನಿಗೆ ತಾನು ಸ್ವತಂತ್ರನೆಂಬ ಭ್ರಮೆಯಿದ್ದರೆ ಅದನ್ನು ಪರಿಹರಿಸಲು ಆಚಾರ್ಯನು ಎಲ್ಲ ವಸ್ತುಗಳ ಸ್ವರೂಪಸ್ಥಿತಿಪ್ರವೃತ್ತಿಗಳು ಪರಮಪುರುಷನನ್ನು ಆಶ್ರಯಿಸಿವೆ ಎಂದು ಮೊದಲೇ ಉಪದೇಶಿಸುತ್ತಾನೆ.

1 ನಮ್ಮ ಜಗತ್ತು ಮಾತ್ರವಲ್ಲ, ಇತರ ಲೋಕಗಳಲ್ಲೂ.

2 ಸ್ವರೂಪದಲ್ಲಾಗಲೀ ಅಥವಾ ಗುಣದಲ್ಲಾಗಲೀ ಪರಿಣಾಮವನ್ನು ಹೊಂದುವ ಭೋಗ್ಯ-ಭೋಕ್ತೃರೂಪವಾದ ಎಲ್ಲ ವಸ್ತುಗಳು.

3 ಭಗವಂತನು ಆತ್ಮನಾಗದಿರುವ ಯಾವ ವಸ್ತುವೂ ಇಲ್ಲವೆಂದು ಸೂಚಿಸಲು 'ಯತ್ಕಿಂಚ' ಎಂಬ ವಿಶೇಷಣವನ್ನು ಪ್ರಯೋಗಿಸಿದೆ.

4 ಈಶ್ವರನಿಗಿಂತ ವ್ಯತಿರಿಕ್ತವಾದ ಚಿದಚಿದಾತ್ಮಕವಸ್ತುಸಮೂಹ.

5 ಸರ್ವನಿಯಾಮಕನಾದ ಪುರುಷೋತ್ತಮನಿಂದ.

6 'ಇದು ಭೋಗ್ಯ' ಎಂಬ ಭ್ರಮೆಗೆ ವಿಷಯವಾದ ಜಗತ್ತಿನ.

7 ಜಗತ್ತು ಅನೇಕ ದೋಷಗಳಿಂದ ಕೂಡಿರುವುದೆಂಬ ಜ್ಞಾನದಿಂದ.

8 ಶಾಸ್ತ್ರದಿಂದ ನಿಷೇಧಿಸಲ್ಪಡದ, ಯೋಗಾನುಷ್ಠಾನಕ್ಕೆ ಮತ್ತು ಧರ್ಮಾಚರಣೆಗೆ ಉಪಯುಕ್ತವಾದ, ದೇಹಧಾರಣೆಗೆ ಮಾತ್ರ ಬೇಕಾದ ಭೋಗ್ಯವರ್ಗವನ್ನು ಅನುಭವಿಸು; ಅಥವಾ ಎಲ್ಲರಿಗೂ ವಾಸಸ್ಥಾನವೂ ನಿರತಿಶಯಭೋಗ್ಯವೂ ಆದ ಬ್ರಹ್ಮವನ್ನು ಅನುಭವಿಸು.

9 ಕೇವಲ ಧನತ್ಯಾಗವಲ್ಲ; ಈಶ್ವರನ ಹೊರತು ಇತರ ಸಮಸ್ತವಿಷಯಗಳನ್ನು ಬಿಡಬೇಕು. "ಪರಮಾತ್ಮನಿ ಯೋ ರಕ್ತೋ ವಿರಕ್ತೋऽಪರಮಾತ್ಮನಿ" ಎಂದು ಸ್ಮೃತಿ ಹೇಳಿದೆ.]

೨. ಇಲ್ಲಿ ಕರ್ಮಗಳನ್ನು ಮಾಡುತ್ತಲೇ ನೂರು ವರ್ಷ ಜೀವಿಸಲು ಇಚ್ಛೆಪಡಬೇಕು.[1] ಹೀಗಿರುವ ನಿನಗೆ[2] ಇದಕ್ಕಿಂತ ಬೇರೆ ಯಾವುದೂ ಇಲ್ಲ. ಕರ್ಮವು ಮನುಷ್ಯನಿಗೆ ಅಂಟಿಕೊಳ್ಳುವುದಿಲ್ಲ.[3]

[ಭಗವತ್ಪ್ರೀತಿಗಾಗಿ ಮಾಡುವ ನಿಃಸ್ವಾರ್ಥಕರ್ಮವು ಜ್ಞಾನಕ್ಕೆ ವಿರೋಧಿಯಲ್ಲ. ಫಲಸಂಗ ಕರ್ತೃತ್ವ ಮೊದಲಾದುವುಗಳನ್ನು ಬಿಟ್ಟು ಜ್ಞಾನಕ್ಕೆ ಅಂಗವಾದ ನಿತ್ಯನೈಮಿತ್ತಿಕಕರ್ಮಗಳನ್ನು ಯಾವಜ್ಜೀವವೂ ಮಾಡಬೇಕೆಂದು ಆಚಾರ್ಯನು ಉಪದೇಶಿಸುತ್ತಾನೆ.

[1] ಬ್ರಹ್ಮವೇತ್ತನಿಗೂ ಕೂಡ ಜ್ಞಾನವು ಪೂರ್ಣವಾಗುವ ವರೆಗೆ ಜೀವನವು ಇಷ್ಟವೆಂದು ತಿಳಿಸಲು ಈಪ್ಸಾರ್ಥಕಪ್ರತ್ಯಯವನ್ನು ಪ್ರಯೋಗಿಸಿದೆ.

[2] ಬ್ರಹ್ಮವಿದ್ಯೆಗೆ ಅಧಿಕಾರಿಯಾದ ನಿನಗೆ.

[3] ವಿರಕ್ತನಾದ ವಿವೇಕಿಯು ಜ್ಞಾನಕ್ಕೆ ಉಪಯುಕ್ತವಾಗದ ಕಾಮ್ಯಕರ್ಮಗಳನ್ನೂ ನಿಷಿದ್ಧಕರ್ಮಗಳನ್ನೂ ಬುದ್ಧಿಪೂರ್ವಕವಾಗಿ ಎಂದಿಗೂ ಮಾಡುವುದಿಲ್ಲ. ಅವನು ಜ್ಞಾನಕ್ಕೆ ಸಹಾಯವಾಗುವ ಕರ್ಮಗಳನ್ನೇ ಮಾಡುವುದರಿಂದ ಐಹಿಕಫಲಗಳು ಅವನಿಗೆ ಉಂಟಾಗುವುದಿಲ್ಲ.]

೩. ಅಸುರ್ಯ[1] ಎಂಬ ಲೋಕಗಳು ಕುರುಡುಗತ್ತಲೆಯಿಂದ ಮುಚ್ಚಿಕೊಂಡಿರುತ್ತವೆ. ಆತ್ಮಘಾತಿಗಳಾದ[2] ಜನರು,[3] ಅವರು ಯಾರೇ[4] ಆಗಲಿ, ಮೃತಿಹೊಂದಿದ ಮೇಲೆ ಅವುಗಳನ್ನು ಪಡೆಯುತ್ತಾರೆ.

[ಧನೇಚ್ಛೆಯಿಂದಲೂ ಜ್ಞಾನಾಭಾವದಿಂದಲೂ ಆಸುರೀಸ್ವಭಾವದ ಜನರ ಜ್ಞಾನ ಕರ್ಮಗಳು ಹುಸಿಯಾಗಿ ಅವರು ಅಧೋಗತಿಯನ್ನು ಹೊಂದುತ್ತಾರೆ. ಶಿಷ್ಯನು ಬ್ರಹ್ಮಜ್ಞಾನವನ್ನು ಶೀಘ್ರವಾಗಿ ಗ್ರಹಿಸಲಿ ಎಂಬುದೇ ಈ ಉಪದೇಶದ ಉದ್ದೇಶ.

[1] ಅಸುರರಿಗೆ ಸೇರಿದ್ದು ಎಂದರೆ ಆಸುರೀಸ್ವಭಾವದ ಜನರಿಂದ ಅನುಭವಿಸಲ್ಪಡತಕ್ಕದ್ದು.

[2] "ಬ್ರಹ್ಮವು ಅಸತ್ತು ಎಂದು ಅರಿತರೆ ಅವನು ಅಸತ್ತೇ ಆಗುತ್ತಾನೆ" ಎಂದು ತೈತ್ತಿರೀಯಶ್ರುತಿಯು (೨-೧) ಹೇಳಿರುವಂತೆ ತಮ್ಮನ್ನು ಇಲ್ಲದಿರುವಂತೆ ಮಾಡಿಕೊಳ್ಳುವವರು ಆತ್ಮಘಾತಿಗಳು.

[3] ಜನಿಸುವವರಿಗೆ (ಎಂದರೆ ಸಂಸಾರದಲ್ಲಿರುವವರಿಗೆ) ಜನರೆಂದು ಹೆಸರು.

[4] ದೇವಜಾತಿಗೆ ಸೇರಿದವನಾಗಲೀ ಅಥವಾ ಮನುಷ್ಯಜಾತಿಗೆ ಸೇರಿದವನಾಗಲೀ.]

೪. ಆ ಏಕ(ವಸ್ತುವು)[1] ಚಲಿಸದಿದ್ದರೂ[2] ಮನಸ್ಸಿಗಿಂತ ವೇಗವುಳ್ಳದ್ದು.[3] (ಎಲ್ಲವನ್ನೂ) ಮೊದಲೇ ಹೊಂದಿದ್ದ ಇದನ್ನು ದೇವತೆಗಳು[4] ಹೊಂದಲಿಲ್ಲ.[5] ಅದು ನಿಂತುಕೊಂಡೇ, ಓಡುತ್ತಿರುವ ಇತರ (ವಸ್ತುಗಳನ್ನು) ದಾಟುತ್ತದೆ. ಮಾತರಿಶ್ವನು ಅದರ (ಸಾಮರ್ಥ್ಯದಿಂದ) ನೀರನ್ನು ಎತ್ತಿ ಹಿಡಿದಿರುತ್ತಾನೆ.[6]

[ಸರ್ವಕ್ಕೂ ನಿವಾಸಸ್ಥಾನವಾದ ಪ್ರಸ್ತುತ ಈಶ್ವರತತ್ತ್ವವು ವಿಚಿತ್ರಶಕ್ತಿಯಿಂದ ಕೂಡಿದೆಯೆಂಬುದನ್ನು ಪರಸ್ಪರ ವಿರುದ್ಧಾರ್ಥವುಳ್ಳಂತೆ ಕಾಣುವ ಶಬ್ದಗಳಿಂದ ಈ ಮಂತ್ರವು ವಿಶದವಾಗಿ ತಿಳಿಸುತ್ತದೆ.

[1] ಪ್ರಧಾನವಾದದ್ದು; ಇದಕ್ಕೆ ಸಮಾನವಾದ ಯಾವ ಸ್ವತಂತ್ರವಸ್ತುವೂ ಇಲ್ಲ; ಅದ್ವಿತೀಯವಾದದ್ದು.

2 ಸಮಸ್ತವಸ್ತುಗಳೂ ಇದರಿಂದ ಯಾವಾಗಲೂ ವ್ಯಾಪ್ತವಾಗಿರುವುದರಿಂದ ಇದು ಚಲಿಸಲು ಯಾವ ಪ್ರದೇಶವೂ ಇಲ್ಲ; ಆದುದರಿಂದ ಇದು ಅಚಲವು.

3 ಮನಸ್ಸಿಗೆ ಗೋಚರವಾಗುವುದನ್ನೆಲ್ಲ ಅತಿಕ್ರಮಿಸುವುದರಿಂದ.

4 ಬ್ರಹ್ಮನೇ ಮೊದಲಾದವರು.

5 ಅದು ವಿಭುತ್ವದಿಂದ ನಿತ್ಯಪ್ರಾಪ್ತವಾಗಿದ್ದರೂ, ಜ್ಞಾನೋದಯಕ್ಕೆ ಮೊದಲು ಪ್ರಾಚೀನಕರ್ಮದಿಂದ ಅಡ್ಡಗಟ್ಟಲ್ಪಟ್ಟ ಜ್ಞಾನವುಳ್ಳ ಜೀವಾತ್ಮರು ಸ್ವಬುದ್ಧಿಯಿಂದ ಅದನ್ನು ಹೊಂದಲಾರರು.

6 ಸರ್ವಾಧಾರನಾದ ಸರ್ವೇಶ್ವರನ ಶಕ್ತಿಯ ದ್ವಾರಾ ಮಾತರಿಶ್ವನು (ವಾಯುವು) ಆಕಾಶದಲ್ಲಿರುವ ಸಮಸ್ತವಸ್ತುಗಳನ್ನು ಎತ್ತಿಹಿಡಿದಿರುತ್ತಾನೆ.]

೫. ಅದು ಚಲಿಸುತ್ತದೆ, ಚಲಿಸುವುದಿಲ್ಲ; ಅದು ದೂರದಲ್ಲಿದೆ,[1] ಅದು ಹತ್ತಿರದಲ್ಲಿದೆ; ಅದು ಇದೆಲ್ಲದರ ಒಳಗೂ ಇದೆ, ಅದು ಇದೆಲ್ಲದರ ಹೊರಗೂ ಇದೆ.[2]

[ಆಚಾರ್ಯನು ಹಿಂದೆ ಹೇಳಿದ್ದನ್ನೇ ಇನ್ನೊಂದು ವಿಧವಾಗಿ ಉಪದೇಶಿಸುತ್ತಾನೆ. ಪ್ರಸ್ತುತವಿಷಯದಲ್ಲಿ ಅವನಿಗಿರುವ ಆದರವೇ ಇದಕ್ಕೆ ಕಾರಣ.

1 ಅಜ್ಞಾನಿ ಜ್ಞಾನಿ—ಇವರ ದೃಷ್ಟಿಯಿಂದ ವಿಭುವಾದ ಬ್ರಹ್ಮವು ದೂರದಲ್ಲಿದೆ, ಹತ್ತಿರದಲ್ಲಿದೆ ಎಂದು ಹೇಳಿದೆ. "ಗೋವಿಂದನಿಂದ ಪರಾಙ್ಮುಖರೂ, ವಿಷಯವಸ್ತುಗಳಲ್ಲಿ ಆಸಕ್ತರಾದ ಮನಸ್ಸುಳ್ಳವರೂ ಆದ ಜನರಿಗೆ ಪರಬ್ರಹ್ಮವು ದೂರಕ್ಕಿಂತ ದೂರವಾಗಿದೆ; ವಿಷಯತ್ಯಾಗಿಗಳಾಗಿ ಗೋವಿಂದನಲ್ಲಿ ತನ್ಮಯರಾದವರಿಗೆ ಅದು ಹತ್ತಿರದಲ್ಲಿದೆ ಎಂದು ತಿಳಿಯಬೇಕು" ಎಂದು ಶೌನಕರು (ವಿಷ್ಣುಧರ್ಮ, ೯೯–೧೪) ಹೇಳಿದ್ದಾರೆ.

2 ಅದನ್ನು ತಡೆಗಟ್ಟಲು ಯಾವ ವಸ್ತುವೂ ಇಲ್ಲದಿರುವುದರಿಂದ "ಅದು ಒಳಗೂ ಇದೆ"; ಪರಿಮಿತವಸ್ತುಗಳು ಇರುವ ಮತ್ತು ಇಲ್ಲದಿರುವ ಸ್ಥಳದಲ್ಲಿ ಅದು ಇರುವುದರಿಂದ "ಹೊರಗೂ ಇದೆ" ಎಂದು ಹೇಳಿದ್ದಾಯಿತು. "ಜಗತ್ತಿನಲ್ಲಿ ಏನೇನಿದೆಯೋ, ಏನೇನು ನೋಡಲ್ಪಡುತ್ತದೆಯೋ ಕೇಳಲ್ಪಡುತ್ತದೆಯೋ—ಅವೆಲ್ಲವನ್ನು ಒಳಗೂ ಹೊರಗೂ ವ್ಯಾಪಿಸಿಕೊಂಡು ನಾರಾಯಣನು ಇದ್ದಾನೆ" ಎಂದು ನಾರಾಯಣಾನುವಾಕವು ಹೇಳುತ್ತೆ.]

೬. ಯಾವನು ಸರ್ವಪ್ರಾಣಿಗಳನ್ನು ಆತ್ಮದಲ್ಲಿ[1] ನೋಡುವನೋ ಮತ್ತು ಆತ್ಮವನ್ನು[2] ಸರ್ವಪ್ರಾಣಿಗಳಲ್ಲಿ ನೋಡುವನೋ ಅವನು ಯಾವುದರಿಂದಲೂ ಹಿಮ್ಮೆಟ್ಟುವುದಿಲ್ಲ.[3]

[ಎಲ್ಲ ವಸ್ತುಗಳಿಗೂ ಬ್ರಹ್ಮವೇ ಆತ್ಮವಾಗಿದೆಯೆಂದು ಹೇಳಿದ್ದಾಯಿತು. ಅಂತಹ ಜ್ಞಾನದ ಪ್ರಯೋಜನವನ್ನು ಈಗ ಹೇಳಿದೆ.

[1] ಎಲ್ಲರಿಗೂ ಅಂತರಾತ್ಮವಾದ ಬ್ರಹ್ಮದಲ್ಲಿ.

[2] ಬ್ರಹ್ಮವು ಸರ್ವಪ್ರಾಣಿಗಳನ್ನು ವ್ಯಾಪಿಸಿದೆ ಎಂದರ್ಥ; ಏಕೆಂದರೆ ಬ್ರಹ್ಮವನ್ನು ಧರಿಸಲು ಪ್ರಾಣಿಗಳಿಗೆ ಸಾಧ್ಯವಾಗುವುದಿಲ್ಲ.

[3] ಯಾವುದನ್ನೂ ನಿಂದಿಸುವುದಿಲ್ಲ ಎಂದರ್ಥ.]

೭. ಯಾವಾಗ[1] ತಿಳಿದವನಿಗೆ[2] ಆತ್ಮವೇ[3] ಎಲ್ಲ ಪ್ರಾಣಿಗಳೂ ಆಗಿವೆಯೋ ಆಗ ಏಕತ್ವವನ್ನು ನೋಡುತ್ತಿರುವವನಿಗೆ[4] ಮೋಹವೆಲ್ಲಿ?[5] ಶೋಕವೆಲ್ಲಿ?[6]

[ಪುನಃ ಹಿಂದಿನ ಮಂತ್ರದಲ್ಲಿ ಹೇಳಿದುದನ್ನೇ ಸಾಮಾನಾಧಿಕರಣ್ಯದ ದ್ವಾರಾ ಬಲಗೊಳಿಸಲು ಏಕತ್ವದರ್ಶನವು ಶೋಕನಾಶಕವೆಂದು ಆಚಾರ್ಯನು ಹೇಳುತ್ತಾನೆ.

[1] ಧ್ಯಾನಕಾಲದಲ್ಲಿ.

[2] ಸ್ವತಂತ್ರವಸ್ತುವಿಗೂ ಪರತಂತ್ರವಸ್ತುವಿಗೂ ಇರುವ ಭೇದವನ್ನು ಶಾಸ್ತ್ರದಿಂದಲೂ ಉಪದಿಷ್ಟವಾದ ಮಾರ್ಗದಿಂದಲೂ ಸ್ಪಷ್ಟವಾಗಿ ತಿಳಿದವನಿಗೆ.

[3] ಚಿದಚಿದ್ವಸ್ತುರೂಪವಾದ ಜಗತ್ತು ಈಶ್ವರನ ಶರೀರ; ಈಶ್ವರನೇ ಇಂತಹ ಜಗತ್ತಿನ ಆತ್ಮ ಅಥವಾ ಶರೀರಿ. ಈ ಸಂಬಂಧಕ್ಕೆ ಶರೀರ-ಶರೀರಿಭಾವವೆಂದು ಹೆಸರು. ಸರ್ವವಿಶಿಷ್ಟವಾದ ಪರಮಾತ್ಮವೊಂದೇ ಕಾಣುತ್ತಿದೆಯೆಂದು ಅರ್ಥ.

[4] ಎಲ್ಲವನ್ನೂ ವಿಶೇಷಣಗಳಾಗಿ ಹೊಂದಿರುವ ಪರಮಾತ್ಮದ ಏಕತ್ವವನ್ನು ನೋಡುತ್ತಿರುವವನಿಗೆ.

[5] ಆತ್ಮವು ಸ್ವತಂತ್ರವೆಂಬ ಭ್ರಮೆ.

[6] ಎಲ್ಲವೂ ಪರವಿಭೂತಿಗೆ ಸೇರಿದೆಯೆಂಬ ಜ್ಞಾನದಿಂದ ನಿರ್ಮಮತ್ವ ಸಿದ್ಧಿಯಾದರೆ ಎಂತಹ ನಷ್ಟವುಂಟಾದರೂ ಶೋಕವಾಗುವುದಿಲ್ಲ. "ನನ್ನ ಐಶ್ವರ್ಯವು ಅನಂತವಾದರೂ ನನಗೆ ಏನೂ ಇಲ್ಲ. ಮಿಥಿಲಾಪುರವು ಬೆಂಕಿಯಿಂದ ಸುಟ್ಟುಹೋಗುತ್ತಿದ್ದರೂ ನನ್ನದು ಯಾವುದೂ ಸುಟ್ಟುಹೋಗುತ್ತಿಲ್ಲ" ಎಂದು ಜನಕನು (ಶಾಂತಿಪರ್ವ, ೭–೧೯) ಹೇಳಿದ್ದಾನೆ.]

೮. ಸ್ವಪ್ರಕಾಶವಾದ, ಶರೀರವಿಲ್ಲದ,[1] ವ್ರಣವಿಲ್ಲದ, ನರಗಳಿಲ್ಲದ, ಶುದ್ಧವಾದ,[2] ಪಾಪದ ಹೊಡೆತವಿಲ್ಲದ[3] (ಬ್ರಹ್ಮವನ್ನು) ಅವನು[4] ಪಡೆಯುತ್ತಾನೆ. ಅವನು ಕವಿ, ಮನೀಷಿ,[5] ಎಲ್ಲೆಲ್ಲಿಯೂ ಇರುವವನು,[6] ಸ್ವಯಂಭು,[7] ಎಲ್ಲ ವಸ್ತುಗಳನ್ನು[8] ಯಥಾರ್ಥವಾಗಿ ವಿವೇಚನೆಮಾಡಿ ಅನೇಕ ವರ್ಷಗಳವರೆಗೆ[9] (ಮನಸ್ಸಿನಲ್ಲಿ) ಧರಿಸಿದವನು.

[[1] ಎಲ್ಲವೂ ಬ್ರಹ್ಮದ ಶರೀರವಾಗಿದ್ದರೂ ಅದಕ್ಕೆ ಕರ್ಮಶರೀರವಿಲ್ಲ.

[2] ಅಜ್ಞಾನಾದಿದೋಷಗಳ ಗಂಧವಿಲ್ಲ.

3 ಪಾಪಪುಣ್ಯರೂಪವಾದ ಮತ್ತು ಅಜ್ಞಾನಾದಿಗಳಿಗೆ ಕಾರಣವಾದ ಕರ್ಮಗಳಿಂದ ಕಲುಷಿತವಾಗದ.

4 ಸರ್ವಭೂತಗಳಲ್ಲಿ ನೆಲಸಿರುವ ಬ್ರಹ್ಮನನ್ನು ನೋಡುವವನು.

5 ಅಭ್ಯಾಸವೈರಾಗ್ಯಗಳಿಂದ ಮನಸ್ಸನ್ನು ಬಿಗಿಹಿಡಿದಿರುವವನು.

6 ಇತರ ವಿದ್ಯೆಗಳನ್ನು ತಿಳಿದವರನ್ನು ಅತಿಕ್ರಮಿಸುವವನು; ಅಥವಾ ದುರ್ಜಯವಾದ ಕಾಮಕ್ರೋಧಲೋಭಾದಿಗಳನ್ನು ಜಯಿಸಿದವನು.

7 ಸ್ವತಂತ್ರವಾದ ಅಸ್ತಿತ್ವವುಳ್ಳವನು ಎಂದರೆ ನಿತ್ಯಾತ್ಮಸ್ವರೂಪದರ್ಶಿ.

8 ಪರಮಪುರುಷಾರ್ಥ, ಅದರ ಉಪಾಯ, ಅಡಚಣೆ ಮೊದಲಾದುವುಗಳನ್ನು.

9 ಬ್ರಹ್ಮಪ್ರಾಪ್ತಿಯ ವರೆಗೆ ಸಮಸ್ತ ಅಡಚಣೆಗಳನ್ನು ನಾಶಮಾಡಲು.]

೯. ಯಾರು[1] ಅವಿದ್ಯೆಯನ್ನು[2] ಉಪಾಸನೆಮಾಡುತ್ತಾರೋ (ಅವರು) ಕುರುಡುಗತ್ತಲೆಯನ್ನು[3] ಪ್ರವೇಶಿಸುತ್ತಾರೆ; ಆದರೆ ಯಾರು ವಿದ್ಯೆಯಲ್ಲಿಯೇ ನಿರತರಾಗಿರುವರೋ[4] ಅವರು ಅದಕ್ಕಿಂತ ಹೆಚ್ಚಿನ ಕತ್ತಲೆಯನ್ನು ಪ್ರವೇಶಿಸುತ್ತಾರೆ.

[ಹೀಗೆ ವಿಚಿತ್ರಶಕ್ತಿಯಿಂದ ಕೂಡಿದ ಪರಮಾತ್ಮನೇ ವಿಷಯವಾಗಿರುವ ಮತ್ತು ಕರ್ಮವು ಅಂಗವಾಗಿರುವ ಜ್ಞಾನವನ್ನು ಉಪದೇಶಿಸಿ, ಅನಂತರ ಕೇವಲ ಕರ್ಮಾವಲಂಬಿಗಳನ್ನೂ ಕೇವಲ ಜ್ಞಾನಾವಲಂಬಿಗಳನ್ನೂ ನಿಂದಿಸಿ, ಈಗ ಆಚಾರ್ಯನು ವರ್ಣಾಶ್ರಮಧರ್ಮಾನುಗೃಹೀತವಾದ ಜ್ಞಾನದಿಂದ ಸಿದ್ಧಿಸುವ ನಿಃಶ್ರೇಯಸ್ಸಿನ ಪ್ರಾಪ್ತಿಯನ್ನು ಉಪದೇಶಿಸುತ್ತಾನೆ.

1 ಭೋಗೈಶ್ವರ್ಯಾದಿಗಳಲ್ಲಿ ಆಸಕ್ತರಾದವರು.

2 ಜ್ಞಾನರಹಿತವಾದ ಕೇವಲ ಕರ್ಮ. ವಿಷ್ಣುಪುರಾಣವು (೬-೭-೩೧) ಅವಿದ್ಯೆಯನ್ನು ಕರ್ಮವೆಂದು ಕರೆದಿದೆ.

3 ಅತ್ಯಂತ ಗಾಢವಾದ ಅಜ್ಞಾನ.

4 ತಮ್ಮ ಯೋಗ್ಯತೆಗೆ ತಕ್ಕ ಕರ್ಮವನ್ನು ಬಿಟ್ಟು ಜ್ಞಾನದಲ್ಲಿ ಆಸಕ್ತರಾಗಿರುವವರು.]

೧೦. ವಿದ್ಯೆಗಿಂತ (ಸಾಧನವು) ಬೇರೆಯೆಂದೂ, ಅವಿದ್ಯೆಗಿಂತ (ಸಾಧನವು) ಬೇರೆಯೆಂದೂ (ಪೂರ್ವಾಚಾರ್ಯರು) ಹೇಳುತ್ತಾರೆ. ನಮಗೆ ಅದನ್ನು ವಿವರಿಸಿದ ಧೀರರಿಂದ[1] ಈ (ವಚನವನ್ನು) ಕೇಳಿರುತ್ತೇವೆ.

['ವಿದ್ಯಯಾ', 'ಅವಿದ್ಯಯಾ' ಎಂಬ ಪದಗಳು ತೃತೀಯಾವಿಭಕ್ತಿಯಲ್ಲಿದ್ದರೂ, ೧೩ನೇ ಮಂತ್ರದಲ್ಲಿರುವ 'ಸಂಭವಾತ್', 'ಅಸಂಭವಾತ್' ಎಂಬ ಪದಗಳ ಹಾಗೆ ಪಂಚಮ್ಯರ್ಥದಲ್ಲಿ ತೆಗೆದುಕೊಳ್ಳಬೇಕು; ಇಲ್ಲದಿದ್ದರೆ 'ಅನ್ಯ'-ಪದದೊಂದಿಗೆ ಅನ್ವಯಿಸಲು ಕಷ್ಟವಾಗುತ್ತೆ. ಮಾಧ್ಯಂದಿನಪಾಠವು 'ವಿದ್ಯಾಯಾಃ', 'ಅವಿದ್ಯಾಯಾಃ' ಎಂದು

ಪಂಚಮ್ಯಂತವನ್ನೇ ಕೊಟ್ಟಿದೆ. ಕೇವಲ ಕರ್ಮಕ್ಕಿಂತಲೂ ಕರ್ಮನಿರಪೇಕ್ಷವಾದ ಜ್ಞಾನಕ್ಕಿಂತಲೂ, ಮೋಕ್ಷಸಾಧನಗಳು ಬೇರೆ ಎಂದು ಇಲ್ಲಿ ಹೇಳಿದೆ.

1 ಪರಮಾತ್ಮಧ್ಯಾನಪರರಿಂದ.]

೧೧. ಯಾವನು[1] ವಿದ್ಯೆ[2] ಮತ್ತು ಅವಿದ್ಯೆ,[3] ಇವೆರಡನ್ನೂ[4] ಒಟ್ಟಿಗೆ ಅರಿಯುತ್ತಾನೋ[5] (ಅವನು) ಅವಿದ್ಯೆಯ ದ್ವಾರಾ ಮೃತ್ಯುವನ್ನು[6] ದಾಟಿ ವಿದ್ಯೆಯ[7] ದ್ವಾರಾ ಅಮೃತವನ್ನು[8] ಪಡೆಯುತ್ತಾನೆ.

[ಹಿಂದಿನ ಮಂತ್ರದಲ್ಲಿ 'ಅನ್ಯತ್' ಎಂದು ಸಂಗ್ರಹವಾಗಿ ಹೇಳಿದುದನ್ನು ಇಲ್ಲಿ ವಿವರಿಸಿದೆ. ಜ್ಞಾನಕರ್ಮಗಳ ಅನುಷ್ಠಾನವೇ ಈ ಮಂತ್ರದ ಉಪದೇಶ. ಈ ಸಮುಚ್ಚಯದಲ್ಲಿ ಕರ್ಮವು ಜ್ಞಾನಕ್ಕೆ ಅಂಗವಾಗಿರುವುದರಿಂದ ಇದಕ್ಕೆ ವಿಷಮಸಮುಚ್ಚಯವೆಂದು ಹೆಸರು. ನಿತ್ಯಕರ್ಮದ ಅನುಷ್ಠಾನದಿಂದ ಜ್ಞಾನದ ಅಡಚಣೆಗಳು ನಾಶವಾಗಿ ಜ್ಞಾನೋತ್ಪತ್ತಿಯಾಗುತ್ತೆ. ಜ್ಞಾನದಿಂದಲೇ ಮೃತ್ಯುವನ್ನು ದಾಟಲು ಸಾಧ್ಯ.

1 ಯಥಾರ್ಥವಾದ ಉಪದೇಶವನ್ನು ಪಡೆದವನು.

2 ಪರಮಾತ್ಮನ ಉಪಾಸನಾರೂಪವಾದ ಜ್ಞಾನ.

3 ಪರಮಾತ್ಮೋಪಾಸನೆಗೆ ಅಂಗವಾದ ಕರ್ಮ.

4 ಅಂಶಕ್ಕೂ ಪೂರ್ಣಕ್ಕೂ (ಅಥವಾ ಅಂಗಾಂಗಿಗಳಿಗೆ) ಪರಸ್ಪರ ವಿರೋಧವಿಲ್ಲ.

5 ಇವೆರಡರಲ್ಲಿ ಯಾವ ವಿಧವಾದ ಭೇದವನ್ನೂ ಕಲ್ಪಿಸದೆ ಸಮವಾಗಿ ಅನುಷ್ಠಾನ ಮಾಡಬೇಕು.

6 ಜ್ಞಾನವನ್ನು ಸಂಕುಚಿಸುವ, ಮೃತ್ಯುವಿಗೆ ಕಾರಣವಾದ ಪ್ರಾಚೀನಕರ್ಮ.

7 ಹಿಂದೆ ಹೇಳಿರುವಂತೆ (ಮಂತ್ರ೬) ಪರಮಾತ್ಮದರ್ಶನರೂಪವಾದ ಜ್ಞಾನ.

8 ಪರಮಾತ್ಮನನ್ನು.]

೧೨. ಯಾರು ಅಸಂಭೂತಿಯನ್ನು ಉಪಾಸನೆ ಮಾಡುತ್ತಾರೋ (ಅವರು) ಕುರುಡುಗತ್ತಲೆಯನ್ನು ಪ್ರವೇಶಿಸುತ್ತಾರೆ; ಆದರೆ ಯಾರು ಸಂಭೂತಿಯಲ್ಲಿ ನಿರತರಾಗಿರುವರೋ ಅವರು ಅದಕ್ಕಿಂತ ಹೆಚ್ಚಿನ ಕತ್ತಲೆಯನ್ನು ಪ್ರವೇಶಿಸುತ್ತಾರೆ.

[ಮೊದಲು ಉಪಾಸ್ಯವಾದ ಪರಮತತ್ತ್ವವನ್ನೂ ಮತ್ತು ಪರಮಪುರುಷಾರ್ಥವನ್ನು ಹೊಂದುವ ವರೆಗೆ ಕರ್ಮವೆಂಬ ಅಂಗದಿಂದ ಕೂಡಿದ ಉಪಾಸನರೂಪವಾದ ಪರಮಹಿತವನ್ನೂ ಹೇಳಿದ್ದಾಯಿತು. ಈಗ ಮುಂದಿನ ಮೂರು ಮಂತ್ರಗಳಲ್ಲಿ ಪ್ರತಿಬಂಧನಿವೃತ್ತಿರೂಪವಾದ ಮತ್ತು ಪರಬ್ರಹ್ಮಾನುಭವರೂಪವಾದ ಫಲಸಾಧನಗಳ ಧ್ಯಾನವನ್ನು ಜ್ಞಾನದ ಅಂಗವಾಗಿ ಅನುಸಂಧಾನಮಾಡಬೇಕೆಂದು ಹೇಳಿದೆ. ಮೊದಲನೆಯ ಮಂತ್ರದಲ್ಲಿ ಸಂಭೂತಿ-ಅಸಂಭೂತಿಗಳ ಪ್ರತ್ಯೇಕ ಧ್ಯಾನವನ್ನು ನಿಂದಿಸಿದೆ.

'ಸಂಭೂತಿ' ಎಂದರೆ ಬ್ರಹ್ಮಪ್ರಾಪ್ತಿಯ ಒಂದು ರೂಪ. "ಏತಮಿತಃ ಪ್ರೇತ್ಯಾಭಿಸಂಭವಿತಾಸ್ಮಿ" (ಛಾಂದೋಗ್ಯ ಉ. ೩-೧೪-೪), "ಧೂತ್ವಾ ಶರೀರಮಕೃತಂ ಕೃತಾತ್ಮಾ ಬ್ರಹ್ಮಲೋಕಮಭಿಸಂಭವಾನಿ" (ಛಾಂದೋಗ್ಯ ಉ. ೮-೧೩-೧) ಎಂಬ ಶ್ರುತಿಗಳಲ್ಲಿ 'ಸಂಭೂತಿಯು' ಪ್ರತಿಪಾದಿಸಲ್ಪಟ್ಟಿದೆ. ಸಂಭೂತಿಗಿಂತ ಭಿನ್ನವಾದದ್ದು 'ಅಸಂಭೂತಿ'. ಈ ಪದವು ಪ್ರತಿಬಂಧಗಳ ನಾಶವನ್ನು ಸೂಚಿಸುತ್ತದೆ. ಅಸಂಭೂತಿಶಬ್ದವು ಸಂಭೂತಿಯ ಅನುತ್ಪತ್ತಿಯನ್ನಾಗಲಿ ವಿನಾಶವನ್ನಾಗಲಿ ಸೂಚಿಸುವುದಿಲ್ಲ. ಏಕೆಂದರೆ ಅಮೃತ ಪ್ರಾಪ್ತಿಗೆ ಕಾರಣವೆಂದು ಹೇಳಲ್ಪಟ್ಟ ಸಂಭೂತಿಯು ಮೃತ್ಯುವನ್ನು ದಾಟಲು ಕಾರಣ ವಾದುದರಿಂದ ಅದರ ಪ್ರಾಕ್-ಅಭಾವವನ್ನಾಗಲಿ ಪ್ರಧ್ವಂಸಾಭಾವವನ್ನಾಗಲಿ ಹೇಳುವುದು ಯುಕ್ತವಲ್ಲ.]

೧೩. ಸಂಭವಕ್ಕಿಂತ (ಫಲವು) ಬೇರೆಯೆಂದೂ, ಅಸಂಭವಕ್ಕಿಂತ (ಫಲವು) ಬೇರೆಯೆಂದೂ (ಅವರು) ಹೇಳುತ್ತಾರೆ. ನಮಗೆ ಅದನ್ನು[1] ವಿವರಿಸಿದ ಧೀರರಿಂದ ಇದನ್ನು ಕೇಳಿರುತ್ತೇವೆ.

[[1] 'ತತ್' ಎಂದರೆ ಮುಂದೆ ಹೇಳುವ ಎರಡು ಫಲಸಾಧನಗಳು, ಇವೆರಡನ್ನೂ ಒಟ್ಟುಗೂಡಿಸಿ ಧ್ಯಾನಮಾಡಬೇಕು.]

೧೪. ಯಾವನು ಸಂಭೂತಿ-ವಿನಾಶಗಳೆರಡನ್ನೂ ಒಟ್ಟಿಗೆ ಅರಿಯುತ್ತಾನೋ (ಅವನು) ವಿನಾಶದಿಂದ ಮೃತ್ಯುವನ್ನು ದಾಟಿ, ಸಂಭೂತಿಯಿಂದ ಅಮೃತತ್ವವನ್ನು ಪಡೆಯುತ್ತಾನೆ.

[ಅಹಂಕಾರ ದಂಭ ಹಿಂಸೆ ಮೊದಲಾದುವುಗಳ ನಾಶಕ್ಕೆ 'ವಿನಾಶ' ಎಂದು ಹೆಸರು. ಸಮಾಧಿಯ ನಿಷ್ಪತ್ತಿಗೆ 'ಸಂಭೂತಿ' ಎಂದು ಹೆಸರು. ಹಿಂದೆ ಸೂಚಿಸಿದಂತೆ ಇದು ಬ್ರಹ್ಮಪ್ರಾಪ್ತಿಯ ಒಂದು ರೂಪ. 'ವಿನಾಶದ' ಮೂಲಕ ಸಮಾಧಿಗೆ ವಿರೋಧಿಗಳಾದ ಪಾಪಗಳನ್ನು ನಾಶಮಾಡಿ, 'ಸಂಭೂತಿಯ' ಮೂಲಕ ಸಾಧಕನು ಬ್ರಹ್ಮವನ್ನು ಪಡೆಯುತ್ತಾನೆ. ಜ್ಞಾನದ ಅಂಗಗಳಾದ ವಿನಾಶಸಂಭೂತಿಗಳ ಅನುಷ್ಠಾನವು ಆವಶ್ಯಕವೆಂಬುದನ್ನು ದೃಢೀಕರಿಸಲು ಇವುಗಳ ಫಲಗಳನ್ನು ಹೇಳಿದ್ದಾಯಿತು.]

೧೫. ಹಿರಣ್ಮಯವಾದ ಪಾತ್ರೆಯಿಂದ ಸತ್ಯದ ಮುಖವು ಮುಚ್ಚಲ್ಪಟ್ಟಿದೆ,[1] ಸತ್ಯದ (ಎಂದರೆ ಜೀವದ) ಧರ್ಮವಾದ (ಬ್ರಹ್ಮಾನುಭವ) ದರ್ಶನಕ್ಕಾಗಿ, ಹೇ ಪೂಷನ್, ಅದನ್ನು[2] ತೆಗೆದುಹಾಕು.[3]

[ಈಗ ಬ್ರಹ್ಮವಿದ್ಯೆಯನ್ನು ಅಂಗಗಳೊಂದಿಗೆ ಅನುಷ್ಠಾನಮಾಡುತ್ತಿರುವ ಸಾಧಕನು ಫಲಪ್ರಾಪ್ತಿಯ ವರೆಗೂ ಅನುಸಂಧಾನಮಾಡಬೇಕಾದ ಮಂತ್ರಗಳನ್ನು ಉಪದೇಶಿಸು

ತ್ತಾರೆ. ಎಲ್ಲ ಶಬ್ದಗಳಿಗೂ ವಾಚ್ಯನಾದವನು ಪರಮಾತ್ಮನೇ ಎಂದು ತಿಳಿದುಕೊಂಡವರಿಗೆ ಈ ಮಂತ್ರಗಳಲ್ಲಿನ 'ಪೂಷನ್' ಮೊದಲಾದ ಶಬ್ದಗಳು ಆಯಾ ದೇವತೆಗಳ ಮೂಲಕ ಅಥವಾ ಸಾಕ್ಷಾತ್ತಾಗಿ ಬ್ರಹ್ಮದಲ್ಲಿಯೇ ಪರ್ಯವಸಾನವನ್ನು ಹೊಂದುತ್ತವೆ. ಇಲ್ಲಿ ಹೀಗೆ ತಿಳಿದುಕೊಂಡರೆ ಮಾತ್ರ ಒಂದೇ ವಿಷಯವನ್ನು ತಾತ್ಪರ್ಯವಾಗಿ ಉಳ್ಳ ಯಮ ಸೂರ್ಯಾದಿಶಬ್ದಗಳ ಅರ್ಥವು ಹೊಂದಿಕೊಳ್ಳುತ್ತವೆ. ಮೊದಲನೆಯ ಮಂತ್ರದಿಂದ ಸಮಾಧಿಯ ಪ್ರತಿಬಂಧಕಗಳ ನಿವಾರಣೆಗಾಗಿ 'ಪೂಷನ್' ಎಂಬ ಶಬ್ದದಿಂದ ಹೇಳಲ್ಪಟ್ಟ ಭಗವಂತನನ್ನು ಸಾಧಕನು ಪ್ರಾರ್ಥಿಸುತ್ತಾನೆ.

1 ಇಲ್ಲಿ ಸತ್ಯ ಎಂದರೆ ಜೀವಾತ್ಮ; ಮನಸ್ಸು ಜೀವಾತ್ಮದ 'ಮುಖ'. ಎಲ್ಲ ಇಂದ್ರಿಯ ಗಳಿಗೂ ಆಧಾರವಾಗಿರುವುದರಿಂದ 'ಮುಖ' ಎಂಬ ಪದದಿಂದ ಮನಸ್ಸು ಹೇಳಲ್ಪಟ್ಟಿದೆ. ಹೃದಯದಲ್ಲಿರುವ ಪರಮಾತ್ಮನ ಕಡೆಗೆ ಹೋಗಬೇಕಾದ ಮನಸ್ಸು ಹಿರಣ್ಮಯವಾದ (ಎಂದರೆ ರಜೋಗುಣದಿಂದ ತುಂಬಿರುವ ಪಾತ್ರೆಯಿಂದ) ಮುಚ್ಚಲ್ಪಟ್ಟಿದೆ (ತಡೆಯಲ್ಪಟ್ಟಿದೆ). ರಜೋಗುಣವು ರಾಗಾತ್ಮಕವಾದುದರಿಂದ ಚಿನ್ನಕ್ಕೆ ಹೋಲಿಸಲ್ಪಟ್ಟಿದೆ. ಹಿರಣ್ಮಯವೆಂಬ ಪದವು ಕರ್ಮಕ್ಕೆ ಅಧೀನವಾದ ಭೋಗ್ಯವರ್ಗವನ್ನು ಸೂಚಿಸುತ್ತದೆ.

2 ಬ್ರಹ್ಮದರ್ಶನವೇ ಜೀವದ ಧರ್ಮ ಅಥವಾ ಕರ್ತವ್ಯ.

3 ಜೀವಕ್ಕೆ ಮುಖದಂತಿರುವ ಮನಸ್ಸಿನ ಮುಚ್ಚಳವನ್ನು ಬ್ರಹ್ಮದರ್ಶನಕ್ಕಾಗಿ ತೆಗೆದುಹಾಕು.]

೧೬. ಹೇ ಪೂಷನ್, ಏಕರ್ಷಿ,[1] ಯಮನೆ,[2] ಸೂರ್ಯನೆ,[3] ಪ್ರಾಜಾಪತ್ಯನೆ,[4] (ನಿನ್ನ) ರಶ್ಮಿಗಳನ್ನು ತೆಗೆ,[5] ತೇಜಸ್ಸನ್ನು ಒಟ್ಟುಗೂಡಿಸು; ನಿನ್ನ ಕಲ್ಯಾಣತಮವಾದ[6] ರೂಪವು[7] ಯಾವುದೋ[8] ಅದನ್ನು ನೋಡುತ್ತೇನೆ. ಯಾವನು ಆ ಪುರುಷನೋ[9] ಆ ಅವನೇ ನಾನಾಗಿದ್ದೇನೆ.[10]

[ಸಾಧಕನು ದರ್ಶನದ ವಿಶದಭಾವನೆಗಾಗಿ ಭಗವಂತನನ್ನು ಪ್ರಾರ್ಥಿಸುತ್ತಾನೆ.

1 ಅದ್ವಿತೀಯನಾದ ಅತೀಂದ್ರಿಯದೃಷ್ಟಿಯುಳ್ಳ ಋಷಿ.

2 ಎಲ್ಲರ ಅಂತರ್ಯಾಮಿ.

3 ತನ್ನ ಭಕ್ತರ ಬುದ್ಧಿಗಳನ್ನು ಸರಿಯಾಗಿ ಪ್ರೇರಿಸುವವನು.

4 ಪ್ರಜಾಪತಿಯಿಂದ ಉತ್ಪನ್ನರಾದ ಎಲ್ಲ ಪ್ರಜೆಗಳ ಅಂತರ್ಯಾಮಿ.

5 ನಿನ್ನ ಸ್ವರೂಪವನ್ನು ತೋರಿಸಲು ಉಪಯುಕ್ತವಾಗಿರದ ಉಗ್ರರಶ್ಮಿಗಳನ್ನು ತೆಗೆ.

6 ಸಮಸ್ತಕಲ್ಯಾಣಗಳಿಗಿಂತ ಕಲ್ಯಾಣತಮವೂ ಶುಭಾಶ್ರಯವೂ ಆದ.

7 ದಿವ್ಯರೂಪ.

8 ಪುರುಷಸೂಕ್ತ ("ಆದಿತ್ಯವರ್ಣಮ್") ಮೊದಲಾದುವುಗಳಲ್ಲಿ ಪ್ರಸಿದ್ಧವಾದ.

9 ಪೂರ್ಣತ್ವಾದಿಗುಣಗಳಿಂದ ಯುಕ್ತನಾದ, ಆದಿತ್ಯವರ್ಣವಿಗ್ರಹವಿಶಿಷ್ಟನಾದ, ಪುರುಷಸೂಕ್ತಾದಿಗಳಲ್ಲಿ ಪ್ರಸಿದ್ಧನಾದ ಪರಮಪುರುಷನು.

10 ಇಲ್ಲಿ ಜೀವಾತ್ಮಕ್ಕೂ ನಿರ್ವಿಶೇಷಬ್ರಹ್ಮಕ್ಕೂ ಅಭೇದವನ್ನು ಹೇಳಿಲ್ಲ; 'ನಾನು' ಎಂಬ ಪದದಿಂದ ಸೂಚಿಸಲ್ಪಟ್ಟ ಅಂತರಾತ್ಮದ ಧ್ಯಾನವನ್ನು ಹೇಳಿದೆ. "ಅವನೇ ನಾನು ಆಗಿದ್ದೇನೆ" ಎಂಬಲ್ಲಿ 'ನಾನು' ಎಂಬ ಪದವು ಜೀವದ ದ್ವಾರಾ ಅಂತರಾತ್ಮಕ್ಕೆ ಅನ್ವಯಿಸುತ್ತದೆ; ಆದುದರಿಂದ 'ಆಗಿದ್ದೇನೆ' ಎಂಬುದು ಜೀವದ ದ್ವಾರಾ ತನ್ನನ್ನು (ಜೀವನನ್ನು) ವಿಶೇಷಣವಾಗಿ ಉಳ್ಳ ಪರಮಾತ್ಮನಲ್ಲಿ ಪರ್ಯವಸಾನವನ್ನು ಹೊಂದುತ್ತದೆ.]

೧೭. ವಾಯು ಅನಿಲ ಅಮೃತ.[1] ಈಗ[2] ಈ ಶರೀರವು ಭಸ್ಮವೇ ಅಂತ್ಯವಾಗಿ ಉಳ್ಳದ್ದು;[3] ಓಂ[4] ಕ್ರತುವೆ,[5] ಸ್ಮರಿಸು,[6] ಮಾಡಿರುವುದನ್ನು ಸ್ಮರಿಸು.[7] ಎಲೈ ಕ್ರತುವೆ, ಸ್ಮರಿಸು, ಮಾಡಿರುವುದನ್ನು ಸ್ಮರಿಸು.

[1 ವಾಯು ಅನಿಲ ಅಮೃತ ಎಂಬ ಪದಗಳು ಜೀವದ ಪರಿಶುದ್ಧಾತ್ಮಸ್ವರೂಪವನ್ನು ಹೇಳುತ್ತವೆ. ಕರ್ಮಜ್ಞಾನಗಳಿಗೆ ಅನುಸಾರವಾಗಿ ಅಲ್ಲಲ್ಲಿ ಸಂಚರಿಸುವುದರಿಂದ ಜೀವವನ್ನು 'ವಾಯು' ಎಂದು ಕರೆದಿದೆ. ಅದಕ್ಕೆ ಯಾವ ನಿಲಯವೂ ಇಲ್ಲದುದರಿಂದಲೂ ಒಂದೇ ಸ್ಥಾನದಲ್ಲಿ ಸ್ಥಿರವಾಗಿ ಇಲ್ಲದಿರುವುದರಿಂದಲೂ 'ಅನಿಲ' ಎಂದು ಹೇಳಿದೆ. ಎಷ್ಟು ಶರೀರಗಳು ನಾಶವಾದರೂ ಅದು ಸ್ವತಃ 'ಅಮೃತ'.

2 ಜೀವಾತ್ಮವು ಶರೀರವನ್ನು ಬಿಟ್ಟಮೇಲೆ.

3 ಜೀವದ ಅಮೃತತ್ವವನ್ನು ತಿಳಿಯಪಡಿಸಿದ ಮೇಲೆ ಅನಿವಾರ್ಯವಾದ ಶರೀರದ ಮರ್ತ್ಯತೆಯನ್ನು ಹೇಳಿದೆ.

4 ಎಲ್ಲವನ್ನೂ ಪ್ರೇರಿಸುವ ಮಹಾಪುರುಷನನ್ನು ಪ್ರಣವದ ದ್ವಾರಾ ಹೇಳಿದೆ. "ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್" (ಗೀತಾ, ೮–೧೩) ಎಂದು ಭಗವಂತನೇ ಹೇಳಿದ್ದಾನೆ.

5 ಯಜ್ಞಸ್ವರೂಪನೂ ಜ್ಞಾನಯಜ್ಞಗೋಚರನೂ ಆದ ಭಗವಂತನು: "ಅಹಂ ಕ್ರತುರಹಂ ಯಜ್ಞಃ" (ಗೀತಾ, ೯–೧೬).

6 ಅನುಗ್ರಹಪೂರ್ವಕವಾದ ಬುದ್ಧಿಯಿಂದ ನನ್ನನ್ನು ಸ್ಮರಿಸು.

7 ನಾನು ಯತ್ಕಿಂಚಿತ್ ಒಳ್ಳೆಯದನ್ನು ಮಾಡಿದ್ದರೆ, ಅದನ್ನು ಸ್ಮರಿಸಿಕೊಂಡು ಕೃತಜ್ಞನಾಗಿ ನನ್ನನ್ನು ಕಾಪಾಡು.]

೧೮. ಹೇ ಅಗ್ನಿ,[1] ಧನಕ್ಕಾಗಿ[2] ನಮ್ಮನ್ನು[3] ಒಳ್ಳೆಯ ಮಾರ್ಗದಲ್ಲಿ[4] ಕರೆದುಕೊಂಡು ಹೋಗು; ಹೇ ದೇವ, ಎಲ್ಲ ಜ್ಞಾನಗಳನ್ನು[5] ತಿಳಿದ ನೀನು ನಮ್ಮ ಕುಟಿಲವಾದ ಪಾಪವನ್ನು[6] ನಾಶಮಾಡು. ನಿನಗೆ ಪುನಃ ಪುನಃ 'ನಮಃ' ಎಂಬ ಪದವನ್ನು[7] ಹೇಳುತ್ತೇವೆ.

[ತಾನು ಅಪೇಕ್ಷಿಸಿದುದನ್ನು ಅನುಗ್ರಹಿಸಲೆಂದು ಅಗ್ನಿಶಬ್ದವಾಚ್ಯನಾದ ಭಗವಂತನನ್ನು ಉಪಾಸಕನು ಪ್ರಾರ್ಥಿಸುತ್ತಾನೆ.

1 ಅಗ್ನಿಯನ್ನು ಶರೀರವಾಗಿ ಉಳ್ಳವನು: "ಯಸ್ಯಾಗ್ನಿಃ ಶರೀರವ್" (ಬೃಹದಾರಣ್ಯಕ ಉ. ೫-೭-೪).

2 ಶರೀರವಿರುವುದು ಜ್ಞಾನಾರ್ಜನೆಗಾಗಿ ಮತ್ತು ಈಶ್ವರನ ಉಪಾಸನೆಗಾಗಿ; ಅಂತಹ ಶರೀರವನ್ನು ರಕ್ಷಿಸಿಕೊಳ್ಳಲು ಧನವು ಉಪಯುಕ್ತವಾಗಿರುತ್ತದೆ. ಅಥವಾ 'ಅಲೌಕಿಕವಾದ' ಧನವಾದರೂ ಆಗಬಹುದು.

3 ನಿನ್ನನ್ನು ಬಿಟ್ಟರೆ ಬೇರೆ ಗತಿಯಿಲ್ಲದ, ಬೇರೆ ಭಾವವಿಲ್ಲದ.

4 ಶಾಸ್ತ್ರವು ನಿಷೇಧಿಸದೆ ಇರುವ ಸಾಧನದಿಂದ.

5 "ಮಾಯಾ ವಯುನಂ ಜ್ಞಾನಂ" ಇವು ಸಮಾನಾರ್ಥಕಶಬ್ದಗಳು.

6 ಶಾಸ್ತ್ರವು ನಿಷೇಧಿಸಿರುವ ಕರ್ಮಗಳನ್ನು ಮಾಡುವುದು (ಅಕೃತ್ಯ-ಕರಣ) ವಿಧಿಸಿರುವ ಕರ್ಮಗಳನ್ನು ಮಾಡದೆ ಇರುವುದು (ಕೃತ್ಯ-ಅಕರಣ).

7 ಮಾನಸ-ಕಾಯಿಕ-ನಮಸ್ಕಾರಗಳಿಲ್ಲದಿದ್ದರೂ 'ನಮಃ' ಎಂಬ ಶಬ್ದಮಾತ್ರದಿಂದಲೂ ಈಶ್ವರನು ಪ್ರಸನ್ನನಾಗುವನು ಎಂಬುದು 'ಪದವನ್ನು' ಎಂಬುದರ ಅಭಿಪ್ರಾಯ.]

ಈರಾಮಶ್ರೀಗಾನ

ಬೆಲೆ: ೮ ಆಣೆ